ವಿಜಯಪುರ | ಸಂಪುಟ 04 | ಸಂಚಿಕೆ 238 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ನವೆಂಬರ್ 15, 2026

"ಆರ್‌ಎಸ್‌ಎಸ್ ಹಿನ್ನೆಲೆ ಯಾಯಾರಿಗೆ ಇದೆ ಅಂತ ತನಿಖೆ ಮಾಡುತ್ತಿದ್ದೇವೆ. ಅಂತವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಅಥ–'ವಾ ಸರ್ಕಾರವೇ ಅವರಿಗೆ ನೀಡಿರುವ ಸ್ಥಾನ ಮಾನ ರದ್ದು ಮಾಡಬೇಕು. ಆರ್‌ಎಸ್–ಎಸ್ ನಂಟು ಇರುವಂತವರಿಗೆ ನೀಡಿರುವ ಹುದ್ದೆಯನ್ನು ವಾಪಸ್ ಪಡೆಯಬೇಕು ಎಂದು ನಾವು ಈಗಾಗಲೇ ಹೇಳಿದ್ದೇವೆ. ನಾವು ಸುಮಾರು 400 ಕ್ಕೂ ಹೆಚ್ಚು ನೇಮಕ ಮಾಡಿದ್ದೀವಿ, ಒಂದೆರಡು ಅಚಾತುರ್ಯ ಆಗಿರುತ್ತದೆ."



■ ಬಿ.ಕೆ. ಹರಿಪ್ರಸಾದ್
ಕೆಪಿಸಿಸಿ ಅಧ್ಯಕ್ಷರು

ತಿಕೋಟಾದಲ್ಲಿ ರಾಜ್ಯಮಟ್ಟದ ಮಕ್ಕಳ ವಿಜ್ಞಾನಜಾತ್ರೆಗೆ ಚಾಲನೆ ನೀಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿಕೆ

ಮಕ್ಕಳ ಪ್ರತಿಭೆ ಅನಾವರಣಕ್ಕೆ ಆಧುನಿಕ ತಂತ್ರಜ್ಞಾನ ಬಳಕೆಗೆ ಆದ್ಯತೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಗ್ರಾಮೀಣ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದರೊಂದಿಗೆ ವಿಜ್ಞಾನದ ವಿವಿಧ ಪರಿಕಲ್ಪನೆಗಳನ್ನು ಪ್ರಾಯೋಗಿಕವಾಗಿ ಅರಿತುಕೊಳ್ಳಲು ವಿಜ್ಞಾನಜಾತ್ರೆಗಳು ಉತ್ತಮ ವೇದಿಕೆಯಾಗಿವೆ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಸಂಶೋಧನಾ ಪ್ರವೃತ್ತಿ, ಸೃಜನಶೀಲತೆ ಹಾಗೂ ವೈಜ್ಞಾನಿಕ ಚಿಂತನೆ ಬೆಳೆಸಲು ಸಹಕಾರಿಯಾಗುತ್ತವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಶನಿವಾರ ಮಕ್ಕಳ ದಿನಾಚರಣೆ ಅಂಗವಾಗಿ ತಿಕೋಟಾದ ಎ.ಬಿ. ಜತ್ತಿ ಶಾಲೆ ಆವರಣದಲ್ಲಿ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಬಿ.ಎಲ್.ಡಿ.ಇ ಸಂಸ್ಥೆ ಹಾಗೂ ಅಗಸ್ತ್ಯ ಫೌಂಡೇಶನ್ ಸಹಯೋಗದಲ್ಲಿ ಆಯೋಜಿಸಿದ್ದ ಮಕ್ಕಳ ವಿಜ್ಞಾನಜಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಸುಮಾರು 4,500 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ಎಲ್‌ಕೆಜಿಯಿಂದ ಪಿಯುಸಿವರೆಗೆ 14 ವರ್ಷಗಳ ಶಿಕ್ಷಣವನ್ನು ಒಂದೇ ಸೂರಿನಡಿ ಒದಗಿಸುವುದರ ಜತೆಗೆ ಉಚಿತ ಬಸ್ ಸೌಲಭ್ಯ ಕಲ್ಪಿಸಲಾಗುವುದು. ಮುಂದಿನ ಒಂದೆರಡು ತಿಂಗಳಲ್ಲಿ ಶಾಲೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಲಾಗುವುದು ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳ ಮಕ್ಕಳ ಪೌಷ್ಟಿಕತೆಗೂ ಸರ್ಕಾರ ಆದ್ಯತೆ ನೀಡಿದೆ. ರಾಜ್ಯದ ಸುಮಾರು 45 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜತೆಗೆ ಮೊಟ್ಟೆ ಹಾಗೂ ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ವಿತರಿಸಲಾಗುತ್ತಿದೆ. 1,991 ಕೋಟಿ ರೂ. ವೆಚ್ಚದ ಈ ಕಾರ್ಯಕ್ರಮಕ್ಕೆ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಕಾರ ನೀಡುತ್ತಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣ, ಸುಸಜ್ಜಿತ ವಿಜ್ಞಾನ ಪ್ರಯೋಗಾಲಯ, ಮೂರನೇ ತರಗತಿಯಿಂದ ಕೃತಕ ಬುದ್ಧಿಮತ್ತೆ ಪರಿಚಯ ಹಾಗೂ ಆರನೇ ತರಗತಿಯಿಂದ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಯೋಜಿಸಲಾಗಿದೆ. ಆಧುನಿಕ ತಂತ್ರಜ್ಞಾನದ ಜ್ಞಾನವನ್ನು ಬಾಲ್ಯದಿಂದಲೇ ಮಕ್ಕಳಿಗೆ ಪರಿಚಯಿಸುವ ಮೂಲಕ ಭವಿಷ್ಯದ ಸವಾಲುಗಳನ್ನು ಎದುರಿಸಲು ಸಜ್ಜುಗೊಳಿಸಲಾಗುವುದು ಎಂದು ಹೇಳಿದರು.

ಸರ್ಕಾರಿಶಾಲೆಗಳಲ್ಲಿಅರ್ಹ ಹಾಗೂಅನುಭವಿ ಶಿಕ್ಷಕರಿದ್ದು, ಮಕ್ಕಳ ಭವಿಷ್ಯ ರೂಪಿಸಲು ಶ್ರಮಿಸುತ್ತಿದ್ದಾರೆ. ವಿದ್ಯಾರ್ಥಿಗಳು ಶಾಲೆಯಲ್ಲಿ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಪೋಷಕರನ್ನು ಗೌರವಿಸುವುದರ ಜತೆಗೆ ಜೀವನದ ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಉನ್ನತ ಗುರಿ ಸಾಧಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಮಕ್ಕಳ ಕಲಿಕೆ ಮತ್ತು ಪ್ರತಿಭೆ ಅನಾವರಣಕ್ಕೆ ಪೂರಕವಾದ ವಿಜ್ಞಾನಜಾತ್ರೆಗಳನ್ನು ಆಯೋಜಿಸಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಖಾಸಗಿ ಕಂಪನಿಗಳು ಹಾಗೂ ಕೈಗಾರಿಕೋದ್ಯಮಿಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಸಹಕಾರ ನೀಡಬೇಕು ಎಂದು ಕರೆ ನೀಡಿದರು.

ನಾಗನೂರು ರುದ್ರಾಕ್ಷಿ ಮಠದ ಅಲ್ಲಮಪ್ರಭು ಮಹಾಸ್ವಾಮೀಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಾಗಠಾಣ ಶಾಸಕ ವಿಠ್ಠಲ ಕಟಕಧೊಂಡ, ಶಾಲಾ ಶಿಕ್ಷಣ ಇಲಾಖೆಯ ಧಾರವಾಡದ ಅಪರ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ, ಜಿಲ್ಲಾಧಿಕಾರಿ ಡಾ. ಆನಂದ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಮಂಜುನಾಥ ಗುಳೇದಗುಡ್ಡ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಮುಜಾವರ್, ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ, ಎ.ಬಿ. ಜತ್ತಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ವಿಜ್ಞಾನಾಸಕ್ತರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಬಲೇಶ್ವರ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ



ಈ ಸಂದರ್ಭದಲ್ಲಿ ಮಾತನಾಡಿದ ಬೃಹತ್ ಮತ್ತು ಮಧ್ಯಮ ಕೈಗಾ–ರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅವರು, ಬಡ ರೈತರು ಹಾಗೂ ಕೂಲಿ ಕಾರ್ಮಿಕರ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಬಬಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದರು.

ಶಾಲೆಗಳ ಅಭಿವೃದ್ಧಿಗೆ ಖಾಸಗಿ ಕಂಪನಿಗಳ ಸಾಮಾಜಿಕ ಹೊಣೆಗಾ–ರಿಕೆ ನಿಧಿ ಹಾಗೂ ದಾನಿಗಳ ಸಹಕಾರ ಪಡೆಯಲಾಗುತ್ತಿದೆ. ಅಂಗನವಾಡಿ ಕೇಂದ್ರಗಳಿಗೂ ಆಟಿಕೆ ಮತ್ತು ಆಟದ ಉಪಕರಣಗಳನ್ನು ಒದಗಿಸಿ, ಮಕ್ಕಳ ಕಲಿಕೆ ಹಾಗೂ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಲಾಗುತ್ತಿದೆ. ಈ ಮೂಲಕ ಬಾಲ್ಯದಿಂದಲೇ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಬೆಳೆಸಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮೀಣ ಮಕ್ಕಳಲ್ಲಿ ಅಪಾರ ಪ್ರತಿಭೆಯಿದ್ದು, ಸೂಕ್ತ ಅವಕಾಶ ಮತ್ತು ಪ್ರೋತ್ಸಾಹ ದೊರೆತರೆ ಅವರು ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಿದೆ. ಶಿಕ್ಷಣದ ಜತೆಗೆ ಕ್ರೀಡೆ, ಸಂಗೀತ, ನೃತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಮಕ್ಕಳಿಗೆ ಅವಕಾಶ ಕಲ್ಪಿಸಬೇಕು. ಸರ್ಕಾರಿ ಶಾಲೆಗಳನ್ನು ಅತ್ಯುತ್ತಮ ಕಲಿಕಾ ಕೇಂದ್ರಗಳನ್ನಾಗಿ ರೂಪಿಸುವ ಕಾರ್ಯಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಬೇಕು. ಪೋಷಕರು ಮಕ್ಕಳನ್ನು ತಪ್ಪದೆ ಶಾಲೆಗೆ ಕಳುಹಿಸುವುದರ ಜತೆಗೆ ಅವರ ಶಿಕ್ಷಣಕ್ಕೆ ನಿರಂತರ ಪ್ರೋತ್ಸಾಹ ನೀಡಬೇಕು ಎಂದು ಸಚಿವ ಡಾ. ಎಂ.ಬಿ.ಪಾಟೀಲ ಹೇಳಿದರು.

ಕುಡಿವ ನೀರು ಸರಬರಾಜು ಸ್ಥಗಿತ: ಬಿಜೆಪಿಯಿಂದ ಪ್ರತಿಭಟನೆ ಎಚ್ಚರಿಕೆ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ನಗರದಲ್ಲಿ ಕಳೆದ ಒಂದೂವರೆ ತಿಂಗಳಿಂದ 24/7 ಕುಡಿಯುವ ನೀರು ಸರಬರಾಜು ಸ್ಥಗಿತಗೊಂಡಿದ್ದು, ಜನರು ಕುಡಿಯುವ ನೀರಿಗಾಗಿ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ ನೀರು ಪೂರೈಕೆಗೆ ಕ್ರಮ ಕೈಗೊಳ್ಳದಿದ್ದರೆ ಒಂದು ವಾರದೊಳಗೆ ಬಿಜೆಪಿ ಮಹಿಳಾ ಮೋರ್ಚಾ, ಯುವ ಮೋರ್ಚಾ ಸೇರಿದಂತೆ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ನಗರಸಭೆ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ಇಂಡಿ ಮಂಡಲ ಪ್ರಧಾನ ಕಾರ್ಯದರ್ಶಿ ದೇವೇಂದ್ರ ಕುಂಬಾರ ಎಚ್ಚರಿಕೆ ನೀಡಿದ್ದಾರೆ.

ಶನಿವಾರ ನಗರದ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದರೂ ನಗರಸಭೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ. ಜನರಿಗೆ ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವುದು ಸ್ಥಳೀಯ ಆಡಳಿತದ ಪ್ರಮುಖ ಜವಾಬ್ದಾರಿಯಾಗಿದೆ. ಆದರೆ ಒಂದೂವರೆ ತಿಂಗಳಿನಿಂದ 24/7 ನೀರು ಪೂರೈಕೆಯಾಗದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ವಿವಿಧ ವಾರ್ಡ್‌ಗಳ ನಿವಾಸಿಗಳು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೇಸಿಗೆಯಲ್ಲಿಯೂ ಇಷ್ಟೊಂದು ತೊಂದರೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕಿದ್ದ ಅಧಿಕಾರಿಗಳು ಸಮಸ್ಯೆ ಉಲ್ಬಣಗೊಂಡರೂ ಸೂಕ್ತ ಪರಿಹಾರ ಕಂಡುಕೊಳ್ಳುತ್ತಿಲ್ಲ ಎಂದು ದೂರಿದ್ದಾರೆ.

ಕ್ಷೇತ್ರದ ಶಾಸಕರು ಹಾಗೂ ನಗರಸಭೆ ಅಧಿಕಾರಿಗಳು ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಒಂದು ವಾರದೊಳಗೆ ನಗರಕ್ಕೆ ನೀರು ಬಿಡದಿದ್ದರೆ ಬಿಜೆಪಿ ಮಹಿಳಾ ಮೋರ್ಚಾ, ಯುವ ಮೋರ್ಚಾ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಬೃಹತ್ ಪ್ರತಿಭಟನೆನಡೆಸಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ದೇವೇಂದ್ರ ಕುಂಬಾರ ತಿಳಿಸಿದ್ದಾರೆ.

ಅಶೋಕ ಅಕಲಾದಿ, ಮಂಜುನಾಥ ದೇವರ, ದತ್ತಾ ಬಂಡೇನವರ, ಸಾಗರ ಬಿರಾದಾರ, ಬಾಗೇಶ ಪೂಜಾರಿ ಸೇರಿದಂತೆ ಇನ್ನಿತರರು ಇದ್ದರು.

ಮಕ್ಕಳು ಮಾನವ ಲೋಕದ ಸುಂದರ ಪುಷ್ಪಗಳು :ಗೌರಮ್ಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳು ಮಾನವ ಲೋಕದ ಸುಂದರ ಪುಷ್ಪಗಳಾಗಿದ್ದು, ಮಕ್ಕಳ ಮನೋವಿಕಾಸಕ್ಕೆ ಪೂರಕವಾದ ಮಕ್ಕಳ ಸ್ನೇಹಿ ವಾತಾವರಣವನ್ನು ನಾಡಿನ ನಾಳಿನ ಭವಿಷ್ಯದ ಆಶಾಕಿರಣಗಳಾಗಿರುವ ಮಕ್ಕಳಿಗೆ ರೂಪಿಸಿ ಕೊಡಬೇಕಾದ ಜವಾಬ್ದಾರಿ ಪಾಲಕರು ಮತ್ತು ನಾಗರಿಕ ಸಮಾಜದ ಮೇಲಿದೆ ಎಂದು ಕುಮಾರಿ ಗೌರಮ್ಮ ಸಂಗಮೇಶ ಬಬಲೇಶ್ವರ ಹೇಳಿದರು.

ಶನಿವಾರ ಅವರು ಮಾತೋಶ್ರೀ ಗೌರಮ್ಮ ಅಪ್ಪಾಸಾಹೇಬ ಬಬಲೇಶ್ವರ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ "ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ್ ಮಹಾವಿದ್ಯಾಲಯದಲ್ಲಿ" ನಡೆದ ಮಕ್ಕಳ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ದೇಶದ ಮೊದಲ ಪ್ರಧಾನಿ ಶ್ರೀ ಪಂಡಿತ್ ಜವಾಹರಲಾಲ್ ನೆಹರು ಅವರ ಕೊಡುಗೆಗಳನ್ನು ಸ್ಮರಿಸಿದ ಅವರು, ನೆಹರು ಜಿ ಅವರ ಮಕ್ಕಳ ಮೇಲಿನ ಮಮತೆಯನ್ನು ಸ್ಮರಿಸಿ ತಮ್ಮ ಜನ್ಮದಿನವನ್ನೇ ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲು ನಿರ್ಧರಿಸಿದ ಅವರ ಮಕ್ಕಳ ಮೇಲಿನ ಪ್ರೀತಿ ಅನನ್ಯವಾದದ್ದು, ಅವರ ಆದ–'ರ್ಶಗಳು ನಮ್ಮೆಲ್ಲರಿಗೂ ದಾ–ರಿದೀಪವಾಗಲಿ ಎಂದು ಹೇಳಿದರು.


ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಚಾರ್ಯೆ ಶ್ರೀಮತಿ ಶ್ವೇತಾ ಬಿರಾದಾರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಜಕುಮಾರ ತಿಡುಗುಂದಿ ಆಗಮಿಸಿದ್ದರು.

ಸಮಾರಂಭದಲ್ಲಿ ಐಶ್ವರ್ಯ ಜಂಬಗಿ, ಅಶ್ವಿನಿ ಬಡಿಗೇರ್, ಶಶಿಧರ್ ತೇಲಿ, ದೀಪಾ ಬರಗನಿ, ಸುಮಯ್ಯಾ ಕಾಲಿಫಾ, ಸನಾಜುಮ್ ಪಟೇಲ್, ಅಮೃತಾ ಪತ್ತಾರ್, ಶಿವಾನಂದ್ ಗಿರಡೆ ಹಾಗೂ ಕಾಲೇಜಿನ ಸಮಸ್ತ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ದೇವರಹಿಪ್ಪರಗಿಯಲ್ಲಿ ಸಹಕಾರ ಸಪ್ತಾಹ :ಧ್ವಜಾರೋಹಣ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಇಟ್ಟುಕೊಂಡು 73 ವರ್ಷಗಳಿಂದ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದು ಸಮೃದ್ಧಿ ಸಹಕಾರ ಸಂಘದ ಉಪಾಧ್ಯಕ್ಷ ರಿಯಾಜ್ ಯಲಗಾರ ಹೇಳಿದರು.

ಪಟ್ಟಣದ ಸಮೃದ್ಧಿ ಸಹಕಾರ ಸಂಘದ ಆವರಣದಲ್ಲಿ ಶನಿವಾರ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಪಿತಾಮಹ ಎಸ್.ಎಸ್.ಪಾಟೀಲ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಸಹಕಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ನವೆಂಬರ್ 14ರಿಂದ 20ರವರೆಗೆ 73ನೇ ಅಖಿಲ ಭಾರತ ಸಹಕಾರ ಸಪ್ತಾಹ ಜರುಗಲಿದೆ. "ಸಹಕಾರ ಸಂಸ್ಥೆಗಳ ಬೆಳವಣಿಗೆಯಲ್ಲಿ ಉತ್ತಮ ಪರಿಸರ, ತಂತ್ರಜ್ಞಾನ, ಕೌಶಲ್ಯಾಧಾ–ರಿತ, ವೃತ್ತಿಪರ ಸೇವೆ ಎಂಬ ಸಪ್ತಾಹದ ಧ್ಯೇಯ ಹಾಗೂ ಸುಸ್ಥಿರ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ದಿನದ ವಿಷಯ ಹಾಗೂ ಘೋಷಣೆಗಳೊಂದಿಗೆ ಈ ಸಪ್ತಾಹ ಆರಂಭಗೊಂಡಿದೆ ಎಲ್ಲ ಸಹಕಾರಿಗಳು ತಪ್ಪದೇ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮಾಹಿತಿ ನೀಡಿದರು.

ಖ್ಯಾತ ವೈದ್ಯ ಆರ್. ಆರ್.ನಾಯಿಕ, ನಿರ್ದೇಶ'ಕರುಗಳಾದ ಪ್ರಭುದೇವ ಹಿರೇಮಠ, ಬಸವರಾಜ ಬಬಲೇಶ್ವರ, ಕೆ.ಎಸ್.ಕೋರಿ, ಮಂಜುನಾಥ ಒಂಟೆತ್ತಿನ, ಗುರು ಕರಭಂಟನಾಳ, ಅಯ್ಯನಗೌಡ ಪಾಟೀಲ, ಎ.ಕೆ.ಹಿರೇಮಠ, ಪ್ರಭಾರಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಬಸವರಾಜ ಸಜ್ಜನ, ಸಿಬ್ಬಂದಿ ಅಕ್ಷಯ ರಾಠೋಡ, ಬಸವರಾಜ ಹಿರೇಮಠ ಇದ್ದರು.

ವಿಜಯಪುರದಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಧು ಬಂಗಾರಪ್ಪ ಹೇಳಿಕೆ

ಪೋಷಕರ ಸಭೆಗಳ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಒತ್ತು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮಕ್ಕಳಲ್ಲಿರುವ ಪ್ರತಿಭೆ ಮತ್ತು ಜ್ಞಾನವನ್ನು ಗುರುತಿಸಿ, ಅದನ್ನು ಅನಾವರಣಗೊಳಿಸಲು ಗುಣಮಟ್ಟದ ಶಿಕ್ಷಣದ ಜೊತೆಗೆ ಆಧುನಿಕ ತಂತ್ರಜ್ಞಾನದ ಕಲಿಕೆಗೆ ಆದ್ಯತೆ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಗಾಂಧಿ ಚೌಕಿನ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಎಲ್‌ಕೆಜಿಯಿಂದ 12ನೇ ತರಗತಿಯವರೆಗೆ ಒಂದೇ ಸೂರಿನಡಿ ಶಿಕ್ಷಣ ಪಡೆಯುವ ವ್ಯವಸ್ಥೆ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಅಗತ್ಯ ಸಾರಿಗೆ ವ್ಯವಸ್ಥೆಯನ್ನೂ ಕಲ್ಪಿಸಲಾಗುವುದು. ಕಂಪ್ಯೂಟರ್‌ನಿಂದ ಕೃತಕ ಬುದ್ಧಿಮತ್ತೆಯವರೆಗೆ ಮಕ್ಕಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡುವ ಮೂಲಕ ಅವರಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಮೆಗಾ ಪೋಷಕರ–ಶಿಕ್ಷಕರ ಸಭೆಯ ಮೂಲಕ ರಾಜ್ಯದ 42 ಸಾವಿರ ಶಾಲೆಗಳನ್ನು ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಲಾಗಿದೆ. ಪೋಷಕರ ಸಭೆಗಳನ್ನು ನಡೆಸುವ ಮೂಲಕ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಸುಧಾ–ರಿಸಲು ಕ್ರಮ ವಹಿಸಲಾಗಿದೆ. ಬೆಳಗಾವಿ ವಿಭಾಗವು ಶೈಕ್ಷಣಿಕ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡುತ್ತಿದೆ. ಶಿಕ್ಷಣ ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯ ಸರ್ಕಾರಿ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಶಿಕ್ಷಣ ಕ್ಷೇತ್ರದ ಮಹತ್ವವನ್ನು ಇದು ತೋರಿಸುತ್ತದೆ. ಸಚಿವ ಎಂ.ಬಿ. ಪಾಟೀಲರು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ನಿರಂತರ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಬಂಗಾರಪ್ಪ ಅವರು ಜಾರಿಗೆ ತಂದ ಗ್ರಾಮೀಣ ಕೃಪಾಂಕ ಯೋಜನೆಯಿಂದ ಅನೇಕ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರೆತಿ–ದೆ ಎಂದು ಸ್ಮರಿಸಿದ ಅವರು, ಮಕ್ಕಳ ಸೇವೆ ಮಾಡುವುದು ದೇವರ ಸೇವೆ ಮಾಡಿದಂತೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಡಾ. ಎಂ.ಬಿ. ಪಾಟೀಲ, ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪ್ರಾಥಮಿಕ ಶಿಕ್ಷಣ ಅತ್ಯಂತ ಮಹತ್ವದ್ದಾಗಿದೆ. ಗ್ರಾಮೀಣ ಹಾಗೂ ಸಾಮಾನ್ಯ ಕುಟುಂಬಗಳ ಮಕ್ಕಳಿಗೂ ಸೂಕ್ತ ಅವಕಾಶಗಳು ದೊರೆತರೆ ಅವರಲ್ಲಿರುವ ಜ್ಞಾನ ಮತ್ತು ಪ್ರತಿಭೆ ಬೆಳಕಿಗೆ ಬರಲು ಸಾಧ್ಯ. ಈ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಕ್ಕಳಿಂದಲೇ ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ವಿಠ್ಠಲ ಕಟಕಧೊಂಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಜಿಲ್ಲಾಧಿಕಾರಿ ಡಾ. ಆನಂದ್.ಕೆ, ಶಿಕ್ಷಣ ಇಲಾಖೆಯ ಅಪರ ಆಯುಕ್ತ ಈಶ್ವರ ಉಳ್ಳಾಗಡ್ಡಿ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಎ. ಉಪ್ಪಾರ, ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕ ಮಂಜುನಾಥ ಗುಳೇದಗುಡ್ಡ, ವಿಜಯಪುರ ನಗರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಾಘವೇಂದ್ರ ಹೊಸೂರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಿಂದಗಿಯಲ್ಲಿ ಆರೆಸ್ಸೆಸ್ ಭವ್ಯ ಪಥಸಂಚಲನ । ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತಗಳ ಪ್ರಚಾರ ವಿಭಾಗದ ಪ್ರಮುಖ ಅರುಣಕುಮಾರ ಅಭಿಮತ

ರಾಜಕೀಯ ಲಾಭಕ್ಕಾಗಿ ವೀರಶೈವ & ಲಿಂಗಾಯತ ಸಮಾಜ ಒಡೆವ ಪ್ರಯತ್ನ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ದೇಶದಲ್ಲಿ ಹಿಂದೂ ಸಮಾಜವನ್ನು ಒಡೆಯುವ ಪ್ರಯತ್ನಗಳು ನಡೆಯುತ್ತಿದ್ದು, ಜಾತಿ, ಸಮುದಾಯಗಳ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ರಾಜಕೀಯ ಲಾಭಕ್ಕಾಗಿ ವೀರಶೈವ ಮತ್ತು ಲಿಂಗಾಯತ ಸಮಾಜವನ್ನು ಒಡೆಯುವ ಪ್ರಯತ್ನಗಳು ಎಷ್ಟು ದಿನ ನಡೆಯಬೇಕು? ದೇಶದ ಏಕತೆ ಮತ್ತು ಸಮಾಜದ ಹಿತದೃಷ್ಟಿಯಿಂದ ನಾವೆಲ್ಲರೂ ಜಾತಿ ಗೋಡೆಗಳನ್ನು ಕಟ್ಟಿಕೊಳ್ಳದೆ, ನಾವೆಲ್ಲರೂ ಹಿಂದೂಗಳು ಎಂಬ ಏಕತೆಯ ಭಾವನೆಯಿಂದ ಬದುಕು ಕಟ್ಟಿಕೊಳ್ಳಬೇಕು ಎಂದು ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತಗಳ ಪ್ರಚಾರ ವಿಭಾಗದ ಪ್ರಮುಖ ಅರುಣಕುಮಾರ ಹೇಳಿದರು.

ಸಿಂದಗಿ ನಗರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವತಿಯಿಂದ ವಿಜಯದಶಮಿ ನಿಮಿತ್ತ ಹಾಗೂ ಸಂಘದ 101 ವರ್ಷದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ಭವ್ಯ ಪಥಸಂಚಲನ ಹಾಗೂ ಸಂಗಮೇಶ್ವರ ದೇವಸ್ಥಾನದ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ಒಂದೊಂದು ಜಾತಿ, ಸಮುದಾಯಕ್ಕೆ ಸೀಮಿತಗೊಳಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಸಮಾಜ ಆತ್ಮಾವಲೋಕನ ಮಾಡಿಕೊಳ್ಳಬೇಕು. ಡಾ.ಬಿ.ಆರ್.ಅಂಬೇಡ್ಕರ್, ಕಿತ್ತೂರರಾಣಿ ಚೆನ್ನಮ್ಮ ಅಂತಹ ಮಹನೀಯರ ನೀಡಿದ ಕೊಡುಗೆ ಈ ದೇಶಕ್ಕೆ ಅನನ್ಯ. ಆದರೆ ಅವರನ್ನು ಒಂದು ವರ್ಗಕ್ಕೆ ಸೀಮಿತಗೊಳಿಸುವುದು ಸರಿಯಾದ ಕ್ರಮವಲ್ಲ. ಅವರು ದೇಶದ ಹಿತಕ್ಕಾಗಿ ಶ್ರಮಿಸಿದ ಮಹಾನ್ ವ್ಯಕ್ತಿ. ದೇಶದ ಸ್ವಾತಂತ್ರ, ಏಕತೆ ಮತ್ತು ಸಮಾಜದ ಉನ್ನತಿಗಾಗಿ ಹೋರಾಡಿದ ಮಹನೀಯರೆಲ್ಲರೂ ಇಡೀ ದೇಶದ ಆಸ್ತಿಯಾಗಿದ್ದಾರೆ. ಅವರ ಕೊಡುಗೆಗಳನ್ನು ಜಾತಿ, ಧರ್ಮದ ಚೌಕಟ್ಟಿನಲ್ಲಿ ನೋಡುವ ಮನೋಭಾವ ಬದಲಾಗಬೇಕು ಎಂದರು. ಸಮಾಜದಲ್ಲಿ ಮೇಲ್ವರ್ಗ, ಕೆಳವರ್ಗ ಎಂಬ ಭೇದಭಾವ ಇರಬಾರದು. ವ್ಯಕ್ತಿಯ ಜಾತಿ ಅಥವಾ ಸಮುದಾಯಕ್ಕಿಂತ ಆತನ ನಡವಳಿಕೆ, ಗುಣ, ಸಂಸ್ಕಾರ ಮತ್ತು ಸಮಾಜದ ಬಗ್ಗೆ ಹೊಂದಿರುವ ಕಾಳಜಿಯೇ ಆತನ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಸಿಂಧೂ ಬಲ್ಲಾಳರು ಆಳಿದ ಐತಿಹಾಸಿಕ ಹಿನ್ನೆಲೆಯುಳ್ಳ ಸಿಂದಗಿ ನಾಡಿನಲ್ಲಿ ದೇಶಭಕ್ತಿಯ ಪರಂಪರೆ ಅಡಗಿದೆ. ಸಿಂದಗಿಯ ಮಣ್ಣಿನಲ್ಲಿಯೇ ದೇಶಭಕ್ತಿಯ ಭಾವನೆ ಇದೆ. ಇಂತಹ ನೆಲದಲ್ಲಿ ಹಿಂದೂ ಸಮಾಜದ ಸಂಘಟನೆ ಹಾಗೂ ಜಾಗೃತಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಸಂಘಟನೆಯ ಕಾರ್ಯ ಕೇವಲ ಕೆಲವೇ ಪ್ರದೇಶಗಳಿಗೆ ಸೀಮಿತವಾಗದೆ ತಾಲೂಕಿನ ಪ್ರತಿಯೊಂದು ಹಳ್ಳಿ, ಗ್ರಾಮ ಮತ್ತು ಮೂಲೆ ಮೂಲೆಯಲ್ಲಿಯೂ ಸಂಘದ ಶಾಖೆಗಳು ಆರಂಭವಾಗಬೇಕು. ಪ್ರತಿಯೊಬ್ಬರೂ ದೇಶಭಕ್ತಿ ಮತ್ತು ಸಾಮಾಜಿಕ ಜವಾಬ್ದಾರಿಯ ಮನೋಭಾವ ಬೆಳೆಸಿಕೊಂಡು ಸಂಘಟಿತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಸಿಂದಗಿ ಭೀಮಾಶಂಕರ ಮಠದ ಪೀಠಾಧೀಶ್ವರ ಸದ್ಗುರು ದತ್ತಪ್ಪಯ್ಯ ಸ್ವಾಮೀಜಿ ವಹಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ರಮೇಶ ಭೂಸನೂರ, ಅರುಣ ಶಹಾಪೂರ, ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ಸಂತೋಷ ಪಾಟೀಲ, ಅಶೋಕ ನೇಗಿನಾಳ, ಶೇಖರ ಪಾಟೀಲ, ಡಾ.ಸಿದ್ರಾಮ ಚಿಂಚೊಳ್ಳಿ, ಗುರು ದೇಸಾಯಿ, ಈರಣ್ಣ ರಾವುರ, ಶಿವಾನಂದ ರೋಡಗಿ, ಬಸನಗೌಡ ಪಾಟೀಲ, ಮಲ್ಲು ಪೂಜಾರಿ, ವಿನೋದ ಬಡಿಗೇರ ಸೇರಿದಂತೆ ಇತರರು ಇದ್ದರು.

ಪಥಸಂಚಲನ

ಸಿಂದಗಿಯ ಶ್ರೀ ಸಂಗಮೇಶ್ವರ ದೇವಸ್ಥಾನದಿಂದ ಆರಂಭವಾಗಿ ಸ್ವಾಮಿ ವಿವೇಕಾನಂದ ವೃತ್ತ, ತೊಂಟದ ಸಿದ್ದಲಿಂಗ ಶ್ರೀಗಳ ರಸ್ತೆ, ಅಂಬೇಡ್ಕರ್ ವೃತ್ತ, ರೇ. ಚ.ರೇವಡಿಗಾರ ರಸ್ತೆ, ಅಂಬಿಗರ ಚೌಡಯ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಬಂದಾಳ ರಸ್ತೆ, ಜ್ಯೋತಿ ನಗರದ ಮಾರ್ಗ ಸೇರಿದಂತೆ ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿ ಸಂಗಮೇಶ್ವರ ದೇವಸ್ಥಾನದ ಆವರಣ ತಲುಪಿತು. ಪಥಸಂಚಲನದ ಮಾರ್ಗದುದ್ದಕ್ಕೂ ಮನೆಯ ಮುಂದೆ ಮಹಿಳೆಯರು ರಂಗೋಲಿಯಿಂದ ಅಲಂಕರಿಸಿ ಮಹಾಪುರುಷರ ಭಾವಚಿತ್ರಗಳನ್ನು ಇರಿಸಿ ಭಗವಾಧ್ವಜ–ಕ್ಕೆ ಗೌರವ ಸಲ್ಲಿಸಿದರು. ಶಿಸ್ತುಬದ್ಧವಾಗಿ ಹೆಜ್ಜೆಹಾಕಿದ 1000ಕ್ಕೂ ಅಧಿಕ ಗಣವೇಷಧಾರಿಗಳಿಗೆ ಪುಷ್ಪವೃಷ್ಟಿ ಮಾಡಲಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮಾರ್ಗದುದ್ದಕ್ಕೂ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ನೀಡಿತು.



ಶಿಕ್ಷಣದಿಂದ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ: ಪ್ರೊ.ಮಳಗಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಶಿಕ್ಷಣವೆಂಬ ಅಸ್ತ್ರದ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಿದೆ. ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಸಮರ್ಥ ಹಾಗೂ ಜ್ಞಾನವಂತ ಸಮಾಜ ನಿರ್ಮಿಸಬೇಕು ಎಂದು ಪ್ರೊ. ವಿ.ವಿ. ಮಳಗಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜಯಂತಿ ಅಂಗವಾಗಿ ಇತ್ತೀಚಿಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೌಲಾನಾ ಅಬುಲ್ ಕಲಾಂ ಆಜಾದ್ ಅವರು ಸ್ವತಂತ್ರ ಭಾರತದ ಮೊದಲ ಶಿಕ್ಷಣ ಸಚಿವರಾಗಿದ್ದರು. ಕೇವಲ 13ನೇ ವಯಸ್ಸಿನಲ್ಲಿಯೇ ಹತ್ತು ಭಾಷೆಗಳಲ್ಲಿ ಜ್ಞಾನ ಹೊಂದಿದ್ದ ಅವರು, ತಮ್ಮ ಮನೆಯಲ್ಲಿಯೇ ಶಿಕ್ಷಣ ಆರಂಭಿಸಿದ್ದರು. ಪತ್ರಿಕೋದ್ಯಮದಲ್ಲಿಯೂ ಆಸಕ್ತಿ ಹೊಂದಿದ್ದ ಅವರು 'ಆಜಾದ' ಮತ್ತು 'ಅಲ್ ಬಿಲಾಲ್' ಪತ್ರಿಕೆಗಳನ್ನು ಪ್ರಾರಂಭಿಸಿದ್ದರು ಎಂದು ಸ್ಮರಿಸಿದರು. ಭಾರತ ರತ್ನ ಪ್ರಶಸ್ತಿ ಪುರಸ್ಕೃತರಾದ ಆಜಾದ್ ಅವರು ಶಿಕ್ಷಣಕ್ಕೆ ವಿಶೇಷ ಮಹತ್ವ ನೀಡಿದ್ದರು. 6ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಆಶಯ ಹೊಂದಿದ್ದರು. ಸಾಕ್ಷರತೆ ಹೆಚ್ಚಿಸುವ ಉದ್ದೇಶದಿಂದ ವಯಸ್ಕರ ಶಿಕ್ಷಣ–ಕ್ಕೂ ಪ್ರೋತ್ಸಾಹ ನೀಡಿದ್ದರು. ಉನ್ನತ ಶಿಕ್ಷಣ, ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು ಹಾಗೂ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ನೆರವು ದೊರೆಯುವಂತೆ ಶ್ರಮಿಸಿದ್ದರು ಎಂದು ತಿಳಿಸಿದರು.

ಮಹಿಳೆಯರು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಬೇಕು. ಮಹಿಳೆಯರು ಕೇವಲ ಕುಟುಂಬದ ಬೆಳವಣಿಗೆಗೆ ಮಾತ್ರವಲ್ಲ, ಮುಂದಿನ ಪೀಳಿಗೆಯ ಭವಿಷ್ಯ ರೂಪಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಾರೆ. ಆದ್ದರಿಂದ ಪುರುಷರಷ್ಟೇ ಮಹಿಳೆಯರ ಶಿಕ್ಷಣಕ್ಕೂ ಆದ್ಯತೆ ನೀಡಬೇಕು ಎಂದು ಹೇಳಿದರು.

ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಡಾ. ರೂಪಾ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕಿ ಪ್ರೊ.ಜ್ಯೋತಿ ಉಪಾಧ್ಯೆ ಸ್ವಾಗತಿಸಿದರು. ನಾಯ್ಕೋಡಿ ನಿರೂಪಿಸಿದರು. ಡಾ.ಸೌಭಾಗ್ಯ ವಂದಿಸಿದರು.

ಇಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹೆಸ್ಕಾಂ ವತಿಯಿಂದ 11 ಕೆ.ವಿ. ಕೆ.ಐ.ಡಿ.ಬಿ. ಫೀಡರ್ ವ್ಯಾಪ್ತಿಯಲ್ಲಿ ಲಿಂಕ್‌ಲೈನ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು,ಈ ಹಿನ್ನೆಲೆಯಲ್ಲಿ ಈ ಫೀಡರ್ ಮೇಲೆ ಬರುವ 11 ಕೆವಿ ಕೆ.ಐ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ನ.15 ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ

ಆದ್ದರಿಂದ, ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರ ಪ್ರಕಟಣೆ ತಿಳಿಸಿದೆ.

ಜಿಲ್ಲೆಯ ರೈತರಿಗೆ ವಿವಿಧ ಬೆಳೆಗಳ ವಿಮೆಗೆ ಅವಕಾಶ; ಬೆಳೆವಾರು ನೋಂದಣಿ ವಿವರ ಮತ್ತು ವಿಮಾ ಕಂತಿನ ವಿವರ ಪ್ರಕಟ

ಹಿಂಗಾರು–ಬೇಸಿಗೆ ಬೆಳೆಗಳಿಗೆ ವಿಮೆ ಕವಚ: ಕೃಷಿ ಇಲಾಖೆಯಿಂದ ಅಧಿಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ 2026–27ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯ ಸರ್ಕಾರ ಜಾ–ರಿಗೊಳಿಸಿದೆ. ಜಿಲ್ಲೆಯ ರೈತರು ವಿವಿಧ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಈ ಯೋಜನೆಯಡಿ ಬೆಳೆ ಸಾಲ ಪಡೆದ ರೈತರು ಪಹಣಿ, ಆಧಾರ್ ಜೋಡಣೆಯಾದ ಬ್ಯಾಂಕ್ ಪಾಸ್‌ಬುಕ್ ಹಾಗೂ ಆಧಾರ್ ಸಂಖ್ಯೆಯನ್ನು ಹೊಂದಿರಬೇಕು. ಸಾಲ ನೀಡಿದ ಬ್ಯಾಂಕ್‌ಗಳು, ಡಿ.ಸಿ.ಸಿ. ಹಾಗೂ ಇತರೆ ಬ್ಯಾಂಕ್‌ಗಳು, ಗ್ರಾಮ ಒನ್ ಮತ್ತು ಸಾಮಾನ್ಯ ಸೇವಾ ಕೇಂದ್ರಗಳ –ಸಿ.ಎಸ್.ಸಿ. ಮೂಲಕ ಬೆಳೆ ವಿಮೆಗೆ ನೋಂದಣಿ ಮಾಡಿಸಿಕೊಳ್ಳಬಹುದು. ನೋಂದಣಿಗೆ ಫ್ರೂಟ್ಸ್ ಐಡಿ ಕಡ್ಡಾಯವಾಗಿರುತ್ತದೆ.

ಹಿಂಗಾರು ಹಂಗಾಮಿನಲ್ಲಿ ಕಡಲೆ (ಮಳೆಯಾಶ್ರಿತ) ಬೆಳೆಗೆ ಡಿ.31ರವರೆಗೆ ನೋಂದಣಿಗೆ ಅವಕಾಶವಿದ್ದು, ಪ್ರತಿ ಹೆಕ್ಟೇರ್‌ಗೆ ರೈತರ ವಿಮಾ ಕಂತು ರೂ.625.50 ನಿಗದಿಪಡಿಸಲಾಗಿದೆ. ಕಡಲೆ (ನೀರಾವರಿ) ಬೆಳೆಗೆ ಡಿ.31 ಕೊನೆಯ ದಿನವಾಗಿದ್ದು, ವಿಮಾ ಕಂತು ರೂ.693 ಇದೆ.

ಜೋಳ (ಮಳೆಯಾಶ್ರಿತ) ಬೆಳೆಗೆ ನ.16 ಕೊನೆಯ ದಿನವಾಗಿದ್ದು, ಪ್ರತಿ ಹೆಕ್ಟೇರ್‌ಗೆ ರೂ.666 ಹಾಗೂ ಜೋಳ (ನೀರಾವರಿ) ಬೆಳೆಗೆ ನ.16 ಕೊನೆಯ ದಿನವಾಗಿದ್ದು, ರೂ.789 ವಿಮಾ ಕಂತು ನಿಗದಿಪಡಿಸಲಾಗಿದೆ. ಮುಸುಕಿನ ಜೋಳ (ನೀರಾವರಿ) ಬೆಳೆಗೆ ನ.30 ಕೊನೆಯ ದಿನವಾಗಿದ್ದು, ವಿಮಾ ಕಂತು ರೂ.1,143 ಆಗಿದೆ. ಗೋಧಿ (ನೀರಾವರಿ) ಬೆಳೆಗೆ ಡಿ.15 ಕೊನೆಯ ದಿನವಾಗಿದ್ದು, ವಿಮಾ ಕಂತು ರೂ.829.50 ಹಾಗೂ ಗೋಧಿ (ಮಳೆಯಾಶ್ರಿತ) ಬೆಳೆಗೆ ನ.16 ಕೊನೆಯ ದಿನವಾಗಿದ್ದು, ರೂ.550.50 ಪಾವತಿಸಬೇಕು. ಸೂರ್ಯಕಾಂತಿ (ಮಳೆಯಾಶ್ರಿತ) ಬೆಳೆಗೆ ನ.16 ಕೊನೆಯ ದಿನವಾಗಿದ್ದು, ವಿಮಾ ಕಂತು ರೂ.723 ಹಾಗೂ ಕುಸುಬೆ (ಮಳೆಯಾಶ್ರಿತ) ಬೆಳೆಗೆ ನ.16 ಕೊನೆಯ ದಿನವಾಗಿದ್ದು, ರೂ.513 ನಿಗದಿಪಡಿಸಲಾಗಿದೆ. ಬೇಸಿಗೆ ಹಂಗಾಮಿನಲ್ಲಿ ಶೇಂಗಾ (ನೀರಾವರಿ) ಬೆಳೆಗೆ 2027ರ ಫೆ.26ರವರೆಗೆ ನೋಂದಣಿಗೆ ಅವಕಾಶವಿದ್ದು, ಪ್ರತಿ ಹೆಕ್ಟೇರ್‌ಗೆ ರೈತರ ವಿಮಾ ಕಂತು ರೂ.1,167 ಆಗಿದೆ. ಈರುಳ್ಳಿ (ನೀರಾವರಿ) ಬೆಳೆಗೆ ಇದೇ ದಿನ ಕೊನೆಯ ದಿನವಾಗಿದ್ದು, ವಿಮಾ ಕಂತು ರೂ.4,695 ನಿಗದಿಪಡಿಸಲಾಗಿದೆ. ರೈತರು ಬೆಳೆವಾರು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ವಿಮೆ ನೋಂದಣಿ ಮಾಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ತಮ್ಮ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರ ಅಥವಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಕೃಷಿ ಜಂಟಿ ನಿರ್ದೇಶಕರಾದ ಶಿವನಗೌಡ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆ: ಆಕ್ಷೇಪಣೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಮುದ್ರಾಂಕ ಅಂದಾಜು, ಪ್ರಕಟಣೆ ಮತ್ತು ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳ ಪರಿಷ್ಕರಣೆಗಾಗಿ ಕೇಂದ್ರ ಮೌಲ್ಯಮಾಪನ ಸಮಿತಿಯ ರಚನೆ ನಿಯಮಗಳು–2003ರ ನಿಯಮ 4(1)ರಡಿ ರಚಿಸಲಾಗಿರುವ ಮಾರುಕಟ್ಟೆ ಮೌಲ್ಯಮಾಪನ ಉಪ ಸಮಿತಿ, ತಿಕೋಟಾ ವತಿಯಿಂದ ಉಪ ನೋಂದಣಿ ಕಚೇರಿ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಬೆಲೆಗಳ ಕರಡು ಪ್ರತಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಉಪ ಸಮಿತಿಯ ಅಧ್ಯಕ್ಷರು ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ನ.6ರಂದು ನಡೆದ ಸಭೆಯಲ್ಲಿ ಉಪ ಸಮಿತಿಯ ಎಲ್ಲ ಸದಸ್ಯರು ಪಾಲ್ಗೊಂಡು, ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರಗಳನ್ನು ನಿರ್ಧರಿಸಿದ್ದಾರೆ.

ಈ ಪರಿಷ್ಕೃತ ದರಗಳ ಕರಡು ಪ್ರತಿಯನ್ನು ನ.9ರಂದು ಪ್ರಾಥಮಿಕ ಗೆಜೆಟ್ ಅಧಿಸೂಚನೆ ಮೂಲಕ ಪ್ರಕಟಿಸಲಾಗಿದ್ದು, ತಿಕೋಟಾ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಿದೆ.

ಪರಿಷ್ಕೃತ ಮಾರ್ಗಸೂಚಿ ದರಗಳ ಕುರಿತು ಸಾರ್ವಜನಿಕರು ಯಾವುದೇ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ನ.28ರೊಳಗಾಗಿ ಉಪ ನೋಂದಣಾಧಿಕಾರಿಗಳು ಹಾಗೂ ಮಾರುಕಟ್ಟೆ ಮೌಲ್ಯಮಾಪನ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಕೋಟಾ ಇವರಿಗೆ ಸಲ್ಲಿಸಬಹುದಾಗಿದೆ ಎಂದು ತಿಕೋಟಾದ ಉಪ ನೋಂದಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಸಮುದಾಯ ಭವನಗಳ ನಿರ್ಮಾಣಕ್ಕೆ ರೂ. 68 ಲಕ್ಷ ಮಂಜೂರು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು, 2026–27ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗೆ ರೂ.68 ಲಕ್ಷ ಅನುದಾನ ಮಂಜೂರಿಸಿದ್ದಾರೆ. ನಗರ ಮತಕ್ಷೇತ್ರದಲ್ಲಿ ಬರುವ ತೊರವಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವೃಷ್ಣವಿದೇವಿ ಸೇವಾ ಸಮಿತಿಯ ಸಮುದಾಯ ಭವನಕ್ಕೆ ರೂ.10 ಲಕ್ಷ, ಕಂದಾಯ ನೌಕರರ ಬಡಾವಣೆಯ ಜಿಲ್ಲಾ ಕಂದಾಯ ನೌಕರರ ಸಂಘದ ಶ್ರೀ ಆಂಜನೇಯ ದೇವಸ್ಥಾನ ಸಮುದಾಯ ಭವನಕ್ಕೆ ರೂ.10 ಲಕ್ಷ, ವಾರ್ಡ್ ನಂ.5ರ ಆದರ್ಶ ನಗರದ ಬಸವಣ್ಣ ದೇವಸ್ಥಾನದ ಹತ್ತಿರ ಸಮುದಾಯ ಭವನಕ್ಕೆ ರೂ.10 ಲಕ್ಷ, ವಾರ್ಡ್ ನಂ.4ರ ಮಾನಸ ರೆಸಿಡೆನ್ಸಿ ದರ್ಗಾ ರೋಡ ಹಣಮಂತ ದೇವರ ಗುಡಿ ಹತ್ತಿರ ಸಮುದಾಯ ಭವನಕ್ಕೆ ರೂ.10 ಲಕ್ಷ, ತೊರವಿ ಎಲ್.ಟಿ–2ರ ಮರಿಯಮ್ಮ (ಮರಗಮ್ಮ) ದೇವಸ್ಥಾನ ಹತ್ತಿರ ಸಮುದಾಯ ಭವನಕ್ಕೆ ರೂ.5 ಲಕ್ಷ, ವಾರ್ಡ್ ನಂ.32 ಜೋರಾಪುರ ಪೇಠ ಗೊಂಧಳಿ ಗಲ್ಲಿಯ ಭೋವಿ ಸಮಾಜದ ಕಲ್ಯಾಣ ಸಂಘದ ಸಮುದಾಯ ಭವನ ನಿರ್ಮಾಣಕ್ಕೆ ರೂ.9 ಲಕ್ಷ ವಾರ್ಡ್ ನಂ.2ರ ದರ್ಗಾದ ಖಂಜರಭಾಟ ಓಣಿಯ ಲಕ್ಷ್ಮೀ ಗುಡಿ ಹತ್ತಿರ ಸಮುದಾಯ ಭವನ ನಿರ್ಮಾಣಕ್ಕೆ ರೂ.14 ಲಕ್ಷ ಅನುದಾನ ಸೇರಿ ಒಟ್ಟು ರೂ.68 ಲಕ್ಷ ಅನುದಾನ ಮಂಜೂರಿಸಿದ್ದಾರೆ ಎಂದು ನಗರ ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಇಂದು ಆರೆಸ್ಸೆಸ್ ಪಥಸಂಚಲನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಜಯಪುರ ನಗರ ಘಟಕದ ವತಿಯಿಂದ ನಗರ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 15–11–2026, ಭಾನುವಾರ ಭವ್ಯ ಪಥಸಂಚಲನ ಹಾಗೂ ಸಾರ್ವಜನಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಂದು ಮಧ್ಯಾಹ್ನ 2:45 ಗಂಟೆಗೆ ವಿಜಯಪುರ ನಗರದ ಸ್ಯಾಟ್ ಲೈಟ್ ಬಸ್ ನಿಲ್ದಾಣದ ಸಮೀಪದಿಂದ ಗಣವೇಷಧಾರಿ ಸ್ವಯಂ ಸೇವಕರ ಭವ್ಯ ಪಥಸಂಚಲನ ಆರಂಭವಾಗಲಿದೆ. ನಂತರ ಸಂಜೆ 5:00 ಗಂಟೆಗೆ ನಗರದ ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಹಿಂದೂ ಜಾಗರಣ ವೇದಿಕೆಯ ಕ್ಷೇತ್ರ ಸಂಯೋಜಕರು ಜಗದೀಶ್ ಕಾರಂತ ಅವರು ಆಗಮಿಸಿ ಮುಖ್ಯ ವಕ್ತಾರರಾಗಿ ಆಗಮಿಸಿ ಮಾರ್ಗದರ್ಶನ ನೀಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ನಾರಾಯಣಪುರಕ್ಕೆ ನೀರು ನಿಲ್ಲಿಸಿ, ನಮ್ಮ ಬೆಳೆಗೆ ನೀರು ಕೊಡಿ! । ಅಖಂಡ ಕರ್ನಾಟಕ ರೈತ ಸಂಘ, ರೈತ ಸಂಘ ಹಸಿರು ಸೇನೆ & ಕರ್ನಾಟಕ ರಾಜ್ಯ ರೈತ ಸಂಘ ಆಗ್ರಹ

ಆಲಮಟ್ಟಿಯಲ್ಲಿ ರೈತರ ಬೃಹತ್ ಪ್ರತಿಭಟನಾ ಮೆರವಣಿಗೆ

■ ಉದಯರಶ್ಮಿ ದಿನಪತ್ರಿಕೆ



ಆಲಮಟ್ಟಿ: ಆಲಮಟ್ಟಿ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದಿಂದ ಕೆಪಿಸಿಎಲ್ ಮೂಲಕ ನಾರಾಯಣಪುರ ಜಲಾಶಯಕ್ಕೆ ಹರಿಸುತ್ತಿರುವ ನೀರನ್ನು ತಕ್ಷಣ ಸ್ಥಗಿತಗೊಳಿಸಿ, ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಯ ರೈತರ ಹಿಂಗಾರು ಹಾಗೂ ಮುಂಗಾರು ಬೆಳೆಗಳಿಗೆ ಅನುಕೂಲವಾಗುವಂತೆ ಡಿಸೆಂಬರ್ 30ರವರೆಗೆ ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿ ಯೋಜನೆಗಳ ಎಲ್ಲಾ ಕಾಲುವೆಗಳಿಗೆ ನೀರು ಹರಿಸಬೇಕು ಎಂದು ಅಖಂಡ ಕರ್ನಾಟಕ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯ ಸರ್ಕಾರವನ್ನು ಆಗ್ರಹಿಸಿವೆ.

ಆಲಮಟ್ಟಿ ರಾಮಲಿಂಗೇಶ್ವರ ದೇವಸ್ಥಾನದಿಂದ ನೂರಾರು ರೈತರು ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಅಧೀಕ್ಷಕ ಅಭಿಯಂತರರಾದ ಬಿ.ಎಸ್. ಪಾಟೀಲ್ ರವರಿಗೆ ಮನವಿ ಸಲ್ಲಿಸಿದರು.

ವಿಜಯಪುರ ಜಿಲ್ಲೆಯ ಆಲಮಟ್ಟಿ ಮುಖ್ಯ ಅಭಿಯಂತರರು ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿರುವ ರೈತ ಸಂಘಟನೆಗಳು, ಐದು ನದಿಗಳು ಹರಿಯುವ ಪ್ರದೇಶವಾಗಿದ್ದರೂ ವಿಜಯಪುರ ಜಿಲ್ಲೆ ನಿರಂತರ ಬರಗಾಲಕ್ಕೆ ತುತ್ತಾಗುತ್ತಿದೆ. ಪಂಚನದಿಗಳ ಬೀಡು, ಎರಡನೇ ಪಂಜಾಬ್ ಎಂದೇ ಹೆಸರಾಗಿರುವ ಅವಳಿ ಜಿಲ್ಲೆಗಳ ರೈತರಿಗೆ ನದಿಗಳ ನೀರಿನ ಸಮರ್ಪಕ ಪ್ರಯೋಜನ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿವೆ.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ್ ಕುಲಕರ್ಣಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಲಿಂಗರಾಜು ಆಲೂರು, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಠ್ಠಲ್ ಬಿರಾದಾರ್ ಮಾತನಾಡಿ, ಈ ವರ್ಷ ಸ್ಥಳೀಯ ಭಾಗದಲ್ಲಿ ಮಳೆ ಸಂಪೂರ್ಣ ಕೈಕೊಟ್ಟಿದ್ದು, ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳಲ್ಲಿ ಉತ್ತಮ ಮಳೆಯಾದ ಕಾರಣ ಆಲಮಟ್ಟಿ ಜಲಾಶಯ ಭರ್ತಿಯಾಗಿತ್ತು. ಇದರಿಂದ ಬೇಸಿಗೆಯವರೆಗೂ ಕುಡಿಯುವ ನೀರು ಹಾಗೂ ಬೆಳೆಗಳಿಗೆ ನೀರಿನ ತೊಂದರೆಯಾಗುವುದಿಲ್ಲ ಎಂಬ ನಿರೀಕ್ಷೆಯಲ್ಲಿದ್ದ ರೈತರಿಗೆ ಸರ್ಕಾರ ನಿರಾಸೆ ಮೂಡಿಸಿದೆ.

ಮುಂಗಾರು ಬೆಳೆಗಳಿಗೆ ಸಮರ್ಪಕ ನೀರು ಒದಗಿಸದ ಸರ್ಕಾರ, ಕೆರೆಗಳಿಗೂ ಅಗತ್ಯ ಪ್ರಮಾಣದಲ್ಲಿ ನೀರು ಹರಿಸಿಲ್ಲ. ಇದೀಗ ಹಿಂಗಾರು ಬೆಳೆಗಳಿಗೂ ನೀರು ನೀಡುವುದಿಲ್ಲ ಎಂಬ ನಿರ್ಧಾರ ಕೈಗೊಂಡಿರುವುದು ರೈತ ವಿರೋಧಿ ಕ್ರಮವಾಗಿದೆ ಎಂದು ಸಂಘಟನೆಗಳು ಆರೋಪಿಸಿದರು.

ಕಳೆದ ತಿಂಗಳು 15ರಂದು ಬೆಂಗಳೂರಿನಲ್ಲಿ ನಡೆದ ಐಸಿಸಿ ಸಭೆಯಲ್ಲಿ ಹಿಂಗಾರು ಬೆಳೆಗಳಿಗೆ ನೀರು ಹರಿಸದಿರಲು ನಿರ್ಧರಿಸಲಾಗಿದೆ. ಆದರೆ, ಮತ್ತೊಂದೆಡೆ ಕಳೆದ 12–13 ದಿನಗಳಿಂದ ಆಲಮಟ್ಟಿ ಜಲಾಶಯದಿಂದ ಕೆಪಿಸಿಎಲ್ ಮೂಲಕ ಪ್ರತಿದಿನ 17 ಸಾವಿರದಿಂದ 20 ಸಾವಿರ ಕ್ಯೂಸೆಕ್‌ವರೆಗೆ ನೀರನ್ನು ನಾರಾಯಣಪುರ ಜಲಾಶಯಕ್ಕೆ ಹರಿಸಲಾಗುತ್ತಿದೆ. ಈಗಾಗಲೇ ತೆಲಂಗಾಣ ರಾಜ್ಯಕ್ಕೆ ನದಿ ಪಾತ್ರದ ಮೂಲಕ 7 ಟಿಎಂಸಿಗಿಂತಲೂ ಅಧಿಕ ನೀರು ಹರಿಸಲಾಗಿದೆ. ಇದರಿಂದ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹ ಗಣನೀಯವಾಗಿ ಕಡಿಮೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಇದೇ ರೀತಿ ಪ್ರತಿದಿನ ನೀರನ್ನು ನಾರಾಯಣಪುರಕ್ಕೆ ಹರಿಸುತ್ತಿದ್ದರೆ ಆಲಮಟ್ಟಿ ಜಲಾಶಯ ಬರಿದಾಗಿ, ಬೇಸಿಗೆಯಲ್ಲಿ ಕುಡಿಯುವ ನೀರಿಗೂ ಸಂಕಷ್ಟ ಎದುರಾಗುವ ಸಾಧ್ಯತೆಯಿದೆ. ಇಂತಹ ಪರಿಸ್ಥಿತಿಯಲ್ಲಿ ಸ್ಥಳೀಯ ರೈತರ ಬೆಳೆಗಳಿಗೆ ನೀರು ನಿರಾಕರಿಸಿ, ಬೇರೆ ರಾಜ್ಯಗಳಿಗೆ ನೀರು ಹರಿಸುತ್ತಿರುವುದು ಅವಳಿ ಜಿಲ್ಲೆಯ ರೈತರಿಗೆ ಮಾಡುತ್ತಿರುವ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಲಮಟ್ಟಿ ಜಲಾಶಯ ನಿರ್ಮಾಣಕ್ಕಾಗಿ ಲಕ್ಷಾಂತರ ಎಕರೆ ಫಲವತ್ತಾದ ಭೂಮಿಯನ್ನು ಕಳೆದುಕೊಂಡು ಸಾವಿರಾರು ಕುಟುಂಬಗಳು ನಿರಾಶ್ರಿತರಾಗಿವೆ. ಆದರೂ ಈ ಭಾಗದ ರೈತರಿಗೆ ನೀರಾವರಿ ವಿಚಾರದಲ್ಲಿ ಇನ್ನೂ ನ್ಯಾಯ ದೊರೆತಿಲ್ಲ. ತೆಲಂಗಾಣ ರಾಜ್ಯವು ಆಲಮಟ್ಟಿ ಜಲಾಶಯದ ನೀರಿನ ಮಟ್ಟವನ್ನು ನ್ಯಾಯಾಧಿಕರಣದ ತೀರ್ಪಿನಂತೆ 524.256 ಮೀಟರ್‌ಗೆ ನಿಗದಿಪಡಿಸುವ ವಿಚಾರಕ್ಕೆ ಅಡ್ಡಿಪಡಿಸಿದ್ದಲ್ಲದೆ, ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದೆ. ಇಂತಹ ಸಂದರ್ಭದಲ್ಲಿ ಆ ರಾಜ್ಯಕ್ಕೆ ಕರ್ನಾಟಕದ ನೀರನ್ನು ಹರಿಸುವುದಕ್ಕೆ ಸರ್ಕಾರ ಯಾವ ಆಧಾರದಲ್ಲಿ ಮುಂದಾಗಿದೆ ಎಂದು ಪ್ರಶ್ನಿಸಿದರು.

ತೆಲಂಗಾಣ ರಾಜ್ಯಕ್ಕೆ ನೀರಿನ ಅಗತ್ಯವಿದ್ದರೆ ಮೊದಲು ನ್ಯಾಯಾಧಿಕರಣದ ತೀರ್ಪಿಗೆ ಸಂಬಂಧಿಸಿದ ಪ್ರಕರಣವನ್ನು ಹಿಂಪಡೆಯಬೇಕು. ನಂತರ ಕರ್ನಾಟಕದಲ್ಲಿ ಹೆಚ್ಚುವರಿ ನೀರು ಲಭ್ಯವಿದ್ದರೆ ಮಾತ್ರ ನೀರು ನೀಡುವ ಕುರಿತು ಚಿಂತಿಸಬಹುದು. ಅಲ್ಲಿಯವರೆಗೆ ತೆಲಂಗಾಣಕ್ಕೆ ಒಂದು ಹನಿ ನೀರನ್ನೂ ಹರಿಸಬಾರದು ಎಂದು ರೈತ ಸಂಘಟನೆಗಳು ಒತ್ತಾಯಿಸಿದರು. ವಿಶೇಷವಾಗಿ ತೊಗರಿ, ಹತ್ತಿ, ಮೆಕ್ಕೆಜೋಳ ಹಾಗೂ ಈರುಳ್ಳಿ ಬೆಳೆಗಳಿಗೆ ಸದ್ಯ ತುರ್ತಾಗಿ ನೀರಿನ ಅಗತ್ಯವಿದೆ. ಹೀಗಾಗಿ ಕೆಪಿಸಿಎಲ್ ಮೂಲಕ ನಾರಾಯಣಪುರಕ್ಕೆ ಹರಿಸುತ್ತಿರುವ ನೀರನ್ನು ತಕ್ಷಣ ಸ್ಥಗಿತಗೊಳಿಸಿ, ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿ ಯೋಜನೆಗಳ ಎಲ್ಲಾ ಕಾಲುವೆಗಳಿಗೆ ಡಿಸೆಂಬರ್ 30ರವರೆಗೆ ನಿರಂತರವಾಗಿ ನೀರು ಹರಿಸಬೇಕು ಎಂದು ಆಗ್ರಹಿಸಿವೆ.

ಅವಳಿ ಜಿಲ್ಲೆಯ ರೈತರ ಹಿತಾಸಕ್ತಿಯನ್ನು ಬಲಿಕೊಟ್ಟು ಬೇರೆ ರಾಜ್ಯಗಳಿಗೆ ನೀರು ಹರಿಸುವುದನ್ನು ಮುಂದುವರಿಸಿದರೆ ರಾಜ್ಯ ಸರ್ಕಾರ ರೈತರ ತೀವ್ರ ಹೋರಾಟವನ್ನು ಎದುರಿಸಬೇಕಾಗುತ್ತದೆ. ಕೂಡಲೇ ಬೇಡಿಕೆ ಈಡೇರಿಸದಿದ್ದರೆ ಆಲಮಟ್ಟಿಯ ಕೆಬಿಜೆಎನ್‌ಎಲ್ ಮುಖ್ಯ ಅಭಿಯಂತರರ ಕಚೇರಿ ಎದುರು ಮೂರು ರೈತ ಸಂಘಟನೆಗಳ ನೇತೃತ್ವದಲ್ಲಿ ಜಂಟಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ವಿಠ್ಠಲ್ ಬಿರಾದಾರ್, ರಾಮನಗೌಡ ಹಾದಿಮನಿ, ಹೊನಕೆರೆಯಪ್ಪ ತೆಲಗಿ, ಲಿಂಗರಾಜು ಆಲೂರು, ಮಲ್ಲಿಕಾರ್ಜುನ ಬಟಗಿ, ಬಸಯ್ಯ ಮಠ, ವೆಂಕಟೇಶ್ ಬಸವರಾಜ ಹೊಸಳ್ಳಿ, ಗುರುಲಿಂಗಪ್ಪ ಪಡಸಲಗಿ, ಲಾಲಪ್ಪ ಲಮಾಣಿ, ರಾಜಸಾಬ್ ವಾಲಿಕಾರ್, ಶಿವಪ್ಪ ಸುಂಟ್ಯಾಳ ಬಾಬು, ಜಲಾಲ್ ಸಾಬ್ ಮುಲ್ಲಾ, ದಾವಲ್ಸಾಬ್ ನದಾಫ್, ಗಿರಿ ಮಲ್ಲಪ್ಪ ದೊಡ್ಡಮನಿ, ಸಿದ್ದಪ್ಪ ಮುರಾಳ, ಯಮನಪ್ಪ ಮಾದರ್, ರಾಮಣ್ಣ ಮನ್ನಾಳ, ಯಮುನಪ್ಪ ಚಿಗುರಿ, ಸಂಗಪ್ಪ ಮಾದರ್, ಸೋಮಪ್ಪ ಶಿವಣಗಿ, ಮಲ್ಲನಗೌಡ ಬಿರಾದಾರ್, ಕಲ್ಲಪ್ಪಗೌಡ ಬಿರಾದಾರ್, ಬಸಯ್ಯ ಹಿರೇಮಠ್, ಹನುಮಂತ ನಾಟಿಕರ್, ಮುತ್ತಪ್ಪ ಜಂಬಿಗಿ, ಮಾರ್ನಿಂಗ್ ಹಿರೇಮಠ್, ಶಿವಾನಂದ ಉದ್ನಾಳ, ಹನುಮಂತರಾಯ ಹಂದ್ರಾಳ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನನ್ನೆದೆಯ ಗೂಡಲ್ಲಿ ನಿನ್ನದೇ ಧ್ಯಾನ..

■ ಉದಯರಶ್ಮಿ ದಿನಪತ್ರಿಕೆ

ನನ್ನ ಪ್ರೀತಿಯ ವಿಕ್ರಮ್,

ಮೌನದ ಚಿಪ್ಪಿನೊಳಗೆ ಜತನದಿಂದ ಅಡಗಿಸಿಟ್ಟ ಮುತ್ತಿನಂತಹ ಪ್ರೀತಿಯನ್ನು, ಆರಾಧಿಸುವ ಜೀವದ



ಎದುರು ತೆರೆದಿಡುವುದು ಒಂದು ಹೆಣ್ಣಿಗೆ ಅತ್ಯಂತ ಸೂಕ್ಷ್ಮ ಮತ್ತು ಸಾಹಸಮಯ ಗಳಿಗೆ. ಕಳೆದ ಎರಡು ವರ್ಷಗಳಿಂದ ನಾನು ನನ್ನ ಎದೆಯ ಗೂಡಿನಲ್ಲಿ ನಿನಗಾಗಿ ಒಲವಿನ ದೀಪವನ್ನು ಹಚ್ಚಿಟ್ಟಿದ್ದೆ. ಮುಂಜಾನೆಯ ಇಬ್ಬನಿಯಂತೆ ಶುದ್ಧವಾಗಿ, ಹೂವಿನಂತೆ ಅರಳಿದ ನನ್ನ ಭಾವನೆಗಳನ್ನು ಪದಗಳಲ್ಲಿ ಪೋಣಿಸಿ ಹೇಳುವಾಗ, ಮನಸ್ಸಿನಲ್ಲಿ ಸಾವಿರಾರು ಕನಸುಗಳು ಮತ್ತು ಅಷ್ಟೇ ಅಂಜಿಕೆಗಳು ಒಟ್ಟಿಗೆ ಸುಳಿದಾಡುತ್ತಿದ್ದವು. ನಿನ್ನನ್ನು ಎಲ್ಲಿ ಕಳೆದುಕೊಳ್ಳುತ್ತೇನೋ ಎಂಬ ಭಯದಿಂದ, ನಮ್ಮ ಸ್ನೇಹದ ಸುರಕ್ಷಿತ ಪರದೆಯ ಹಿಂದೆ ನನ್ನ ಪ್ರೇಮವನ್ನು ಬಚ್ಚಿಟ್ಟಿದ್ದೆ.

ಪ್ರತಿದಿನ ನಿನ್ನೊಂದಿಗೆ ನಗುತ್ತಾ, ಹರಟೆ ಹೊಡೆಯುತ್ತಾ ಇದ್ದರೂ, ನಿನ್ನ ಕಣ್ಣುಗಳನ್ನು ನೇರವಾಗಿ ದಿಟ್ಟಿಸಲು ನನ್ನ ಮನಸ್ಸು ಅಳುಕುತ್ತಿತ್ತು. ಏಕೆಂದರೆ, ಆ ನಿನ್ನ ತೀಕ್ಷ್ಣವಾದ ನೋಟ ನನ್ನ ಒಳಗಿನ ಗುಟ್ಟನ್ನು ಎಲ್ಲಿ ಪತ್ತೆಹಚ್ಚುತ್ತದೆಯೋ ಎಂಬ ಸಿಹಿ ಹೆದರಿಕೆ ನನ್ನದಾಗಿತ್ತು. ಆದರೆ ನಿನ್ನೆಯ ಆ ಹುಣ್ಣಿಮೆಯ ರಾತ್ರಿ, ಆಕಾಶದಲ್ಲಿ ಚಂದ್ರನು ತನ್ನೆಲ್ಲಾ ಬೆಳದಿಂಗಳನ್ನೂ ಭೂಮಿಗೆ ಧಾರೆಯೆರೆಯುತ್ತಿದ್ದಾಗ, ಇನ್ನು ಮುಂದೆ ನನ್ನ ಈ ಪ್ರೇಮಕಾವ್ಯವನ್ನು ನಿನಗೆ ತಿಳಿಸದೆ ಇರಲು ಸಾಧ್ಯವೇ ಇಲ್ಲ ಎಂಬ ದೃಢ ನಿರ್ಧಾರಕ್ಕೆ ಬಂದೆ. ಆ ಕ್ಷಣ ನನ್ನ ಅಂತರಂಗ ನಿನಗಾಗಿ ಹೀಗೆ ಮಿಡಿಯುತ್ತಿತ್ತು:

ಕಣ್ಣ ರೆಪ್ಪೆಯ ಮರೆಯಲ್ಲಿ ಅಡಗಿ ಕುಳಿತ ಕನಸು,
ಇಂದು ನಿನ್ನ ಸಮ್ಮುಖದಲ್ಲಿ ಬಿಚ್ಚಿಟ್ಟಿದೆ ಮನಸು!

ನಾವಿಬ್ಬರೂ ನದಿಯ ದಂಡೆಯಲ್ಲಿದ್ದ ಆ ಪ್ರಶಾಂತವಾದ ಕಲ್ಲಿನ ಬೆಂಚಿನ ಮೇಲೆ ಕುಳಿತಿದ್ದೆವು. ಸುತ್ತಲೂ ರಾತ್ರಿಯ ನೀರವತೆ ಆವರಿಸಿತ್ತು. ದೂರದ ಮರಗಳಿಂದ ಬೀಸುವ ತಂಗಾಳಿಯು ರಾತ್ರಿರಾಣಿ ಹೂವುಗಳ ಸುಗಂಧವನ್ನು ಹೊತ್ತು ತರುತ್ತಿತ್ತು. ಆ ಗಳಿಗೆ ನೀನು ಕತ್ತಲನ್ನು ಸೀಳಿ ಬಂದ ಪೂರ್ಣಚಂದ್ರನಂತೆ ಕಂಗೊಳಿಸುತ್ತಿದ್ದೆ. ಕಪ್ಪು ಬಣ್ಣದ ಕುರ್ತಾ ಧರಿಸಿದ್ದ ನಿನ್ನನ್ನು ನೋಡಿದಾಗ, ನನಗೆ ಕಡುನೀಲಿ ಆಕಾಶದ ಮೋಡಗಳೇ ಧರೆಗಿಳಿದಂತೆ ಭಾಸವಾಯಿತು. ನಿನ್ನ ಗಂಭೀರವಾದ ನಗು ಮತ್ತು ನೀನು ಮಾತನಾಡುವ ಶೈಲಿ ನನ್ನ ಪಾಲಿಗೆ ವೀಣೆಯ ತಂತಿಯಿಂದ ಹೊರಹೊಮ್ಮುವ ಸುಮಧುರ ಸಂಗೀತವಾಗಿತ್ತು. ಗಾಳಿಗೆ ಹಾರಾಡುವ ನಿನ್ನ ತಲೆಗೂದಲನ್ನು ಸರಿಪಡಿಸುವ ನಿನ್ನ ಆ ರೀತಿ, ನನ್ನ ಎದೆಯಲ್ಲಿ ಮಲ್ಲಿಗೆಯ ಕಂಪನ್ನು ಪಸರಿಸಿದಂತಾಗಿ ಇಡೀ ಪರಿಸರವನ್ನೇ ಮೋಹಕವಾಗಿಸಿತ್ತು.

ನಾನು ಆ ದಿನ ತಿಳಿ ಗುಲಾಬಿ ಬಣ್ಣದ ರೇಷ್ಮೆ ಸೀರೆಯನ್ನುಟ್ಟು, ನನ್ನ ಸಹಜ ನಾಚಿಕೆಯೊಂದಿಗೆ ನಿನ್ನ ಪಕ್ಕದಲ್ಲಿ ಕುಳಿತಿದ್ದೆ. ನನ್ನ ಕೈಯಲ್ಲಿದ್ದ ಹಸಿರು ಗಾಜಿನ ಬಳೆಗಳ ಸದ್ದು ನಿನ್ನ ಗಮನವನ್ನು ಸೆಳೆಯುತ್ತಿತ್ತು. ನನ್ನ ಪ್ರತಿಯೊಂದು ನೋಟವೂ, ಕಣ್ರೆಪ್ಪೆಗಳ ಪ್ರತಿ ಚಲನೆಯೂ ನಿನಗಾಗಿ ಹಂಬಲಿಸುತ್ತಿತ್ತು. ನಿನ್ನ ಗಾಂಭೀರ್ಯದ ವ್ಯಕ್ತಿತ್ವವು ನನ್ನನ್ನು ತನ್ನತ್ತ ಸೆಳೆಯುವ ಅಯಸ್ಕಾಂತದಂತೆ ಕೆಲಸ ಮಾಡುತ್ತಿತ್ತು.

ನದಿಯ ನೀರು ದಂಡೆಗೆ ಲಯಬದ್ಧವಾಗಿ ಅಪ್ಪಳಿಸುತ್ತಿತ್ತು. ಬೆಳದಿಂಗಳ ಬೆಳಕಿನಲ್ಲಿ ಆ ನೀರಿನ ಅಲೆಗಳು ಬೆಳ್ಳಿಯ ಗೆರೆಗಳಂತೆ ಹೊಳೆಯುತ್ತಿದ್ದವು. ಆದರೆ ನನ್ನ ಎದೆಯೊಳಗೆ ಅದಕ್ಕಿಂತ ಜೋರಾಗಿ ಭಾವನೆಗಳ ಅಲೆಗಳು ಏಳುತ್ತಿದ್ದವು. ನಮ್ಮಿಬ್ಬರ ನಡುವಿನ ಮೌನವು ಸಮುದ್ರದ ಆಳದಂತೆ ಗಂಭೀರವಾಗಿತ್ತು. ಉಕ್ಕುವ ಕಡಲಿನ ಅಲೆಗಳಂತೆ ಮೌನವಾಗಿ ಸೆಳೆಯುತ್ತಾ, ನನ್ನ ದೃಷ್ಟಿ ನಿನ್ನ ಪ್ರೀತಿಯ ನೋಟವನ್ನು ಸಂಧಿಸಿದಾಗ, ಸುತ್ತಲಿನ ಪ್ರಪಂಚವೆಲ್ಲ ಕ್ಷಣಾರ್ಧದಲ್ಲಿ ಮರೆಯಾಯಿತು. ಅದು ತಂಪಾದ ಮಂಜಿನ ಹನಿಯನ್ನು ಬೆಚ್ಚಗಿನ ಸೂರ್ಯಕಿರಣ ತಾಕಿದಂತಹ ಅದ್ಭುತ ಗಳಿಗೆ! ನಿನ್ನ ದೃಢವಾದ ಪರ್ವತದಂತಹ ವ್ಯಕ್ತಿತ್ವಕ್ಕೆ ನನ್ನ ಬಳ್ಳಿಯಂತಹ ಕೋಮಲ ಮನಸ್ಸು ಸರಿಯಾಗಿ ಹೊಂದಿಕೊಂಡಿತ್ತು. ನಮ್ಮಿಬ್ಬರ ನಡುವಿನ ಗಾಳಿಯಲ್ಲಿ ಒಂದು ಅಗೋಚರ ಪ್ರೇಮದ ಸೇತುವೆ ನಿರ್ಮಾಣವಾಗಿ, ಪದಗಳು ಹುಟ್ಟುವ ಮುನ್ನವೇ ಆ ಭಾವ ನನ್ನ ಮತ್ತು ನಿನ್ನ ಆತ್ಮವನ್ನು ಗಟ್ಟಿಯಾಗಿ ಬೆಸೆದುಬಿಟ್ಟಿತ್ತು! ನೀನು ಹರಿಯುವ ನದಿಯ ನೀರನ್ನು ನೋಡುತ್ತಾ, ಆಕಾಶದ ನಕ್ಷತ್ರಗಳನ್ನು ಎಣಿಸುತ್ತಾ ಮೌನವಾಗಿದ್ದೆ. ನಿನ್ನ ಆ ಸುಂದರವಾದ ಪ್ರಶಾಂತ ಮುಖವನ್ನು ನೋಡುತ್ತಿದ್ದಾಗ, ನನ್ನ ಇಡೀ ಬದುಕು ನಿನ್ನ ಸುತ್ತಲೇ ಹೇಗೆ ಸುತ್ತುತ್ತಿದೆ ಎಂಬುದು ನನಗೆ ಅರಿವಾಯಿತು. ಸೂರ್ಯನ ಸುತ್ತ ತಿರುಗುವ ಭೂಮಿಯಂತೆ ನನ್ನ ಮನಸ್ಸು ನಿನ್ನನ್ನೇ ಪ್ರದಕ್ಷಿಣೆ ಹಾಕುತ್ತಿತ್ತು. ನನ್ನ ಪಕ್ಕದಲ್ಲೇ ಕುಳಿತಿದ್ದ ನಿನಗೆ ನನ್ನ ಒಳಗಿನ ತಳಮಳ ತಿಳಿದಿರಲಿಲ್ಲ. ನನ್ನ ಹೃದಯದ ಪ್ರತಿ ಬಡಿತವೂ, ಉಸಿರಾಟದ ಪ್ರತಿ ಸದ್ದೂ ನಿನ್ನದೇ ಹೆಸರನ್ನು ಜಪಿಸುತ್ತಿತ್ತು.

ನಿನ್ನ ಸಣ್ಣ ಕಾಳಜಿಗೆ ಲೋಕವನ್ನೇ ಮರೆಯುವ ನಾನು, ಇಂದು ನನ್ನ ಮನಸ್ಸನ್ನು ತೆರೆದಿಡಲು ಸಿದ್ಧಳಾಗಿದ್ದೆ. ಏಕೆಂದರೆ, ಈ ಮೌನ ನನ್ನನ್ನು ದಿನೇ ದಿನೇ ಸುಡುತ್ತಿತ್ತು. ನನ್ನಲ್ಲಿದ್ದ ಅಷ್ಟೂ ಧೈರ್ಯವನ್ನು ಒಟ್ಟುಗೂಡಿಸಿ, ನಾನು ನಡುಗುತ್ತಿದ್ದ ನನ್ನ ಕೈಯನ್ನು ನಿನ್ನ ಬಲಿಷ್ಠವಾದ ಹಸ್ತದ ಮೇಲಿಟ್ಟೆ. ನನ್ನ ಆ ಸ್ಪರ್ಶಕ್ಕೆ ನೀನು ಒಂದು ಕ್ಷಣ ಬೆರಗಾದೆ. ಇಡೀ ಪ್ರಕೃತಿಯೇ ಒಂದು ಕ್ಷಣ ಸ್ತಬ್ಧವಾದಂತೆ ಭಾಸವಾಯಿತು. ಗಾಳಿಯೂ ಬೀಸುವುದನ್ನು ನಿಲ್ಲಿಸಿ ನಮ್ಮಿಬ್ಬರನ್ನೇ ನೋಡುತ್ತಿರುವಂತೆ ಅನ್ನಿಸಿತು. ನೀನು ಆಶ್ಚರ್ಯದಿಂದ



ನನ್ನನ್ನು ನೋಡಿದಾಗ, ಸದಾ ನಿನ್ನ ಕಣ್ಣುಗಳಲ್ಲಿರುತ್ತಿದ್ದ ಆ ತಮಾಷೆಯ ನೋಟ ಮಾಯವಾಗಿ, ಅಲ್ಲಿ ಒಂದು ಗಂಭೀರವಾದ ಮೌನ ಆವರಿಸಿತ್ತು. ನಿನ್ನ ಕಣ್ಣುಗಳಲ್ಲಿ ಅಡಗಿದ್ದ ಭಾವನೆಗಳು ನನ್ನ ಉಸಿರಿಗೆ ಹೀಗೆ ಪಿಸುಗುಟ್ಟಿದವು: ಹರಿಯುವ ನದಿಯಲ್ಲಿ ನಿನ್ನ ಹೆಸರೇ ಇತ್ತು ತಿಳಿಯದೇ, ಬೀಸುವ ಗಾಳಿಯಲ್ಲಿ ನಿನ್ನ ನೆನಪೇ ಇತ್ತು ಮರೆಯದೇ, ಮಾತಿನ ಹಂಗಿಲ್ಲದೆ ಪ್ರೀತಿಯ ಮಳೆ ಸುರಿದಾಗ, ಎರಡು ಜೀವಗಳ ಮಿಲನಕ್ಕೆ ಕಾಲ



ಕೂಡಿ ಬಂದಾಗ!

ನನ್ನ ಗಂಟಲು ಒಣಗುತ್ತಿತ್ತು, ಕೈಕಾಲುಗಳು ತಣ್ಣಗಾಗಿದ್ದವು. ಕೆನ್ನೆಗಳು ನಾಚಿಕೆಯಿಂದ ಕೆಂಪೇರಿದ್ದವು. ಆದರೂ ನನ್ನ ಅಂಜಿಕೆಯನ್ನು ಬದಿಗಿಟ್ಟು, ನಿನ್ನ ಕಣ್ಣುಗಳನ್ನೇ ದಿಟ್ಟಿಸಿ, ನನ್ನ ಕನಸಿನಲ್ಲಿ ಸಾವಿರ ಬಾರಿ ಅಭ್ಯಾಸ ಮಾಡಿದ್ದ ಆ ಮಾತುಗಳನ್ನು, ಮೆಲ್ಲಗೆ ನಿನ್ನ ಕಿವಿಯಲ್ಲಿ ಪಿಸುಗುಟ್ಟಿದೆ: "ವಿಕ್ರಮ್, ನಾನು ನಿನ್ನನ್ನು ಮೊದಲ ಭೇಟಿಯಿಂದಲೂ ತುಂಬಾ ಪ್ರೀತಿಸುತ್ತಿದ್ದೇನೆ. ಸ್ನೇಹ ಎಂಬ ಹೆಸರಿನಲ್ಲಿ ಪ್ರತಿದಿನ ನಿನ್ನ ಜೊತೆಗಿದ್ದೇನೆ. ಪ್ರತಿ ರಾತ್ರಿಯ ನನ್ನ ಪ್ರಾರ್ಥನೆಯಲ್ಲಿ ಬರೀ ನೀನೇ ಇದ್ದೆ. ನನ್ನ ಉಸಿರಿನ ಪ್ರತಿ ಬಡಿತವೂ ನಿನಗೇ ಮೀಸಲು. ನಿನ್ನ ನೆರಳಿನಲ್ಲಿ ನನ್ನ ಇಡೀ ಬದುಕನ್ನು ಕಳೆಯುವುದಕ್ಕಿಂತ ದೊಡ್ಡ ಭಾಗ್ಯ ನನಗೆ ಬೇರೊಂದಿಲ್ಲ. ನೀನು ನನ್ನ ಕೈ ಹಿಡಿದು ಬದುಕಿನುದ್ದಕ್ಕೂ ಜೊತೆಯಾಗಿ ನಡೆಯುತ್ತೀಯಾ?"

ಮಾತುಗಳು ಮುಗಿದಾಗ ನನ್ನ ಎದೆ ಹಗುರಾಗಿತ್ತು. ನೀನು ತಕ್ಷಣವೇ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಯುಗದಂತೆ ಭಾಸವಾದ ಆ ಒಂದು ಕ್ಷಣ, ನೀನು ಕೇವಲ ನನ್ನನ್ನೇ ದಿಟ್ಟಿಸುತ್ತಾ ಮೌನಕ್ಕೆ ಶರಣಾದೆ. ಆ ಕ್ಷಣ ನನ್ನ ಹೃದಯದ ಬಡಿತವೇ ನಿಂತುಹೋದಂತಾಯಿತು. ಬಿರುಗಾಳಿಗೆ ಸಿಲುಕಿದ ಪುಟ್ಟ ದೋಣಿಯಂತೆ ನನ್ನ ಮನಸ್ಸು ಅಲ್ಲೋಲಕಲ್ಲೋಲವಾಯಿತು. ಆದರೆ ಮರುಕ್ಷಣವೇ, ನಿನ್ನ ತುಟಿಯಂಚಿನಲ್ಲಿ ಒಂದು ಮುದ್ದಾದ ನಗು ಮೂಡಿತು ಮತ್ತು ನಿನ್ನ ಕಣ್ಣುಗಳು ಪ್ರೀತಿಯಿಂದ ಹೊಳೆಯತೊಡಗಿದವು. ತುಟಿಗಳು ಮೌನವಾಗಿ ಕಣ್ಣುಗಳು ಸಂಭಾಷಿಸಿದಾಗ, ಯುಗಯುಗಗಳ ಕಾಯುವಿಕೆಗೆ ತೆರೆಬಿದ್ದಾಗ, ಬಚ್ಚಿಟ್ಟ ಪ್ರೀತಿಯನ್ನು ನಿನ್ನೆದುರು ತೆರೆದಿಟ್ಟಾಗ, ಇಡೀ ಜಗವೇ ಹೊಸದಾಗಿ ಕಂಗೊಳಿಸಿದಾಗ! ನೀನು ಏನೂ ಮಾತನಾಡದೇ, ನಿನ್ನ ಇನ್ನೊಂದು ಕೈಯನ್ನು ನನ್ನ ಹಸ್ತದ ಮೇಲಿಟ್ಟು ಗಟ್ಟಿಯಾಗಿ ಹಿಡಿದೆ. ಆ ಭದ್ರವಾದ ಸ್ಪರ್ಶದಲ್ಲೇ ನನ್ನ ಎಲ್ಲಾ



ಜಯಶ್ರೀ ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
– ಮೊ:9449234142

ಪ್ರಶ್ನೆಗಳಿಗೂ ಉತ್ತರ ಸಿಕ್ಕಿತ್ತು. ನಿನ್ನ ಆ ಮುಗುಳ್ನಗೆ ನನಗೆ ಹೇಳುತ್ತಿತ್ತು– ನೀನೂ ಕೂಡ ಇದೇ ಕ್ಷಣಕ್ಕಾಗಿ ಕಾಯುತ್ತಿದ್ದೆ ಎಂದು! ಆ ಸುಂದರ ಮೌನದ ಸ್ಪರ್ಶದಲ್ಲಿ, ನನ್ನ ಆತ್ಮವು ವರ್ಷಗಳಿಂದ



ಹುಡುಕುತ್ತಿದ್ದ ನೆಲೆ ನಿನಗೆ ಸಿಕ್ಕಿಬಿಟ್ಟಿತ್ತು. ಇಷ್ಟು ದಿನ ನಮ್ಮಿಬ್ಬರ ಮಧ್ಯೆ ಇದ್ದ ಸ್ನೇಹದ ಗೋಡೆ ಕರಗಿ ಹೋಗಿ, ಅಲ್ಲಿ ಕೇವಲ ಪ್ರೀತಿಯ ಮಹಾಸಾಗರ ಮಾತ್ರ ಉಳಿದಿತ್ತು. ನಮ್ಮಿಬ್ಬರ ವಿಭಿನ್ನ ದಾರಿಗಳು ಒಂದಾದವು ಮತ್ತು ನನ್ನ ಮುಚ್ಚಿಟ್ಟ ಪ್ರೀತಿ ಕೊನೆಗೂ ನಿನಗೆ ಸ್ವಂತವಾಯಿತು. ಇನ್ನುಳಿದ ಬದುಕಿನ ಪ್ರತಿ ಹೆಜ್ಜೆಯಲ್ಲೂ ನಾನು ನಿನ್ನವಳಾಗಿಯೇ ಇರುತ್ತೇನೆ. ಎಂದಿಗೂ ನಿನ್ನವಳೇ, ಅನನ್ಯ.

ಒನಕೆ ಓಬವ್ವ ಧೈರ್ಯ ಸಾಹಸ ಯುವಜನತೆಗೆ ಮಾದರಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕನ್ನಡ ನಾಡಿನ ವೀರನಾರಿಯರ ಸಾಲಿನಲ್ಲಿ ಒನಕೆ ಓಬವ್ವ ಅಗ್ರಗಣ್ಯ ಸಾಲಿನಲ್ಲಿ ನಿಲ್ಲುತ್ತಾರೆ ಅವರ ಧೈರ್ಯ, ಸಾಹಸ ಇಂದಿನ ಯುವ ಜನತೆಗೆ ಮಾದರಿಯಾಗಿವೆ ಎಂದು ನ್ಯಾಯವಾದಿ ದಾನೇಶ ಅವಟಿ ಹೇಳಿದರು.

ಅವರು ವಿಜಯಪುರ ನಗರದ ಮನಗೂಳಿ ರಸ್ತೆಯಲ್ಲಿರುವ ಒನಕೆ ಓಬವ್ವ ವೃತ್ತದಲ್ಲಿ ಒನಕೆ ಓಬವ್ವ ಜಯಂತಿ ಉತ್ಸವ ಸಮಿತಿಯಿಂದ ಹಮ್ಮಿಕೊಂಡಿದ್ದ ಒನಕೆ ಓಬವ್ವ ಜಯಂತಿಯಲ್ಲಿ ಮಾತನಾಡಿದರು.

ಚಿತ್ರದುರ್ಗದ ಕೋಟೆಗೆ ವೈರಿಪಡೆ ಮುತ್ತಿಗೆ ಹಾಕಿದಾಗ ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಕೀರ್ತಿ ಒನಕೆ ಓಬವ್ವ ಅವರಿಗೆ ಸಲ್ಲುತ್ತದೆ ಎಂದರು. ಕಾರ್ಯಕ್ರಮ ಸಂಘಟಕ ಪ್ರದೀಪ ಚಲವಾದಿ ಅವರು ಮಾತನಾಡಿ, ರಾಜ್ಯಪರಂಪರೆಯ ಕಾಲದಲ್ಲಿ ಓಬವ್ವ ಮೆರೆದ ಸಾಹಸ ಪ್ರಜಾಪ್ರಭುತ್ವ ಕಾಲದ ಜನರಿಗೂ ಮಾದರಿಯಾಗಿವೆ ಆ ಕಾರಣಕ್ಕೆ ಸರಕಾರ ಅವರ ಜಯಂತಿ ಆಚರಿಸುತ್ತಿದೆ ಪ್ರತಿಯೊಬ್ಬರು ಅಪ್ರತಿಮ ಶೌರ್ಯ ಅಚಲ ಗುರಿ ಆದರ್ಶ ವ್ಯಕ್ತಿತ್ವ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕರವೇ ಸ್ವಾಭಿಮಾನಿ ಸೇನಾ ಸಮಿತಿ ರಾಜ್ಯಾಧ್ಯಕ್ಷ ಜಗದೇವ ಸೂರ್ಯವಂಶಿ ಹಾಗೂ ಸಂಘ ಸಂಸ್ಥೆಗಳ ಮುಖಂಡ ವಿನೋದ ಖೇಡ ಅವರು ಮಾತನಾಡಿ ಒನಕೆ ಓಬವ್ವ ಮತ್ತು ಅವರ ಪತಿ ಮುದ್ದುನುಮ ಚಿತ್ರದುರ್ಗದ ಕಾಮಖೇತಿ ಮನೆತನದ ಮದಕರಿ ನಾಯಕರಿಗೆ ನಿಷ್ಠರಾಗಿದ್ದರು ಅದೇ ಕಾರಣಕ್ಕೆ ಏಕಾಂಗಿಯಾಗಿ ಒನಕೆ ಓಬವ್ವ ವೈರಿಗಳನ್ನು ಹಿಮ್ಮೆಟ್ಟಿಸಿ ರಾಜ್ಯನಿಷ್ಠೆ ಮೆರೆದು ಇತಿಹಾಸದಲ್ಲಿ ಮಾದರಿ ವೀರನಾರಿಯೆನಿಸಿದ್ದಾರೆ ಎಂದು ಹೇಳಿದರು. ಸಂಘ ಸಂಸ್ಥೆಗಳ ಮುಖಂಡ ಲಾಯಪ್ಪ ಇಂಗಳೆ ಮಾತನಾಡಿ ಒನಕೆ ಓಬವ್ವ ಕರ್ನಾಟಕ ಮಾತ್ರವಲ್ಲ ದೇಶದ ಅಗ್ರಗಣ್ಯ ಐತಿಹಾಸಿಕ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲುವ ವೀರನಾರಿಯಾಗಿದ್ದಾರೆ. ಶತೃ ಸೈನ್ಯದಿಂದ ನಮ್ಮ ದೇಶವನ್ನು ಹೇಗೆ ಕಾಪಾಡಬೇಕು ಎಂಬುದಕ್ಕೆ ಓಬವ್ವಳ ಕಾರ್ಯಾಚರಣೆ ಮಾದರಿಯಾಗಿದೆ. ಪ್ರತಿಯೊಬ್ಬರು ಅವರ ಜೀವನ ಆದರ್ಶ, ಧೈರ್ಯ ಸಾಹಸವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರರಾದ ಅಂಬಾದಾಸ ಜೋಶಿ ಅಶೋಕ



ವಾಲಿಕಾರ, ಮಹೇಶ ಮುಧೋಳ, ಶರಣಪ್ಪ ಕಟ್ಟಿ ಶಂಕರ ಸಾತಪುತೆ, ಅನಿಲ ಇಕ್ಕಡೆ, ಗುರುಲಿಂಗಪ್ಪ ಪಾಟೀಲ, ಚಂದ್ರಶೇಖರ ಹೊಸಮನಿ, ಸಂತೋಷ ಗಡೇದ, ಬಾಬಾ ಇಮಾರತವಾಲೆ ರಾವುತ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಲಿಂಗಾಯತ ಅಲ್ಪ ಸಂಖ್ಯಾತ ಮಾನ್ಯತೆಗೆ ಸರಕಾರದ ಮೀನಮೇಷ ಏಕೆ?

■ ಉದಯರಶ್ಮಿ ದಿನಪತ್ರಿಕೆ

12 ನೆಯ ಶತಮಾನದ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮತೆ ಚಳುವಳಿ ಲಿಂಗಾಯತ ಧರ್ಮದ ಉದಯಕ್ಕೆ ಕಾರಣವಾಯಿತು.

ಭಾರತದ ಪ್ರಸ್ತುತ ಕಾನೂನು ಮತ್ತು ಸಾಂವಿಧಾನಿಕ ಚೌಕಟ್ಟಿನ ಪ್ರಕಾರ, ಲಿಂಗಾಯತ ಧರ್ಮಕ್ಕೆ ಇನ್ನೂ ಪ್ರತ್ಯೇಕ ಅಥವಾ ಸ್ವತಂತ್ರ ಧರ್ಮದ ಕಾನೂನುಬದ್ಧ ಮಾನ್ಯತೆ ಸಿಕ್ಕಿಲ್ಲ. ಕಾನೂನಿನ ದೃಷ್ಟಿಯಲ್ಲಿ ಲಿಂಗಾಯತರನ್ನು ಹಿಂದೂ ಧರ್ಮದ ಒಂದು ಭಾಗವೆಂದೇ ಪರಿಗಣಿಸಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದ ಪ್ರಮುಖ ಕಾನೂನು ಅಂಶಗಳು ಮತ್ತು ಬೆಳವಣಿಗೆಗಳ ವಿವರ ಒಮ್ಮೆ ನೋಡೋಣ:

1. ಪ್ರಸ್ತುತ ಕಾನೂನು ಸ್ಥಿತಿಗತಿ

ಸಾಂವಿಧಾನಿಕ ಮತ್ತು ವೈಯಕ್ತಿಕ ಕಾನೂನುಗಳು. 1955ರ ಹಿಂದೂ ವಿವಾಹ ಕಾಯ್ದೆ (ಊಟಜಣ ಒಚಿಡಿಡಿಜಿಚಿಗಜ ಂಛಿಣ) ಮತ್ತು 1956ರ ಹಿಂದೂ ಉತ್ತರಾಧಿಕಾರ ಕಾಯ್ದೆಗಳ ಅಡಿಯಲ್ಲಿ ಬೌದ್ಧ, ಜೈನ ಮತ್ತು ಸಿಖ್ಖರಂತೆ ಲಿಂಗಾಯತರನ್ನೂ 'ಹಿಂದೂ' ವ್ಯಾಖ್ಯಾನದ ಅಡಿಯಲ್ಲಿಯೇ ಸೇರಿಸಲಾಗಿದೆ.

ಬೌದ್ಧ, ಜೈನ ಮತ್ತು ಸಿಖ್ಖರಿಗೆ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಕಾಯ್ದೆಯಡಿ ಪ್ರತ್ಯೇಕ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ನೀಡಲಾಗಿದೆ. ಆದರೆ ಲಿಂಗಾಯತರಿಗೆ ಆ ಮಾನ್ಯತೆ ಇಲ್ಲ.




ಜನಗಣತಿ ದಾಖಲೆಗಳು.

1871 ಮತ್ತು 1881ರ ಬ್ರಿಟಿಷ್ ಕಾಲದ ಜನಗಣತಿಯಿಂದಲೂ ಲಿಂಗಾಯತರನ್ನು ಹಿಂದೂ ಧರ್ಮದ ಒಂದು ಪಂಗಡ ಅಲ್ಲವೆಂದು ದಾಖಲಿಸುತ್ತಾ ಬರಲಾಗಿದೆ.ಇದು ಲಿಂಗಾಯತರಿಗೆ ತಿಳಿದಿರಾ ಬೇಕು.

2. ಸರ್ಕಾರ ಮತ್ತು ಸಮಿತಿಗಳ ಶಿಫಾರಸುಗಳು

ನಾಗಮೋಹನ್ ದಾಸ್ ಸಮಿತಿ (2017–2018). ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು



ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ರಚಿಸಿತ್ತು. ವೀರಶೈವಪರ ಮತ್ತು ಲಿಂಗಾಯತ ಧರ್ಮದ ಪರ ತಜ್ಞರ ಅಹವಾಲುಗಳನ್ನು ಸ್ವೀಕರಿಸಿ

ನ್ಯಾಯಮೂರ್ತಿ ಶ್ರೀ ನಾಗಮೋಹನದಾಸ ಅವರು

ಲಿಂಗಾಯತ ಇದು ಒಂದು ಅವೈದಿಕ ಹಿಂದುಯೇತರ ಧರ್ಮವಾಗಿದೆ. ವೀರಶೈವ ಲಿಂಗಾಯತ ಧರ್ಮದ ಒಂದು ಭಾಗ ಎಂದು ಸ್ಪಷ್ಟವಾಗಿ ಶಿಫಾರಸ್ಸು ನೀಡಿದೆ. ಆದರೆ ರಾಜಕೀಯ ಒತ್ತಡಕ್ಕೆ ಮಣಿದು ಅಂದಿನ ಕಾಂಗ್ರೆಸ್ ಸರಕಾರವು (2018) ಬಸವ ತತ್ವದಲ್ಲಿ ನಂಬಿಕೆ ಇರುವ ಲಿಂಗಾಯತ ಮತ್ತು ವೀರಶೈವ ಲಿಂಗಾಯತರಿಗೆ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ಕೇಂದ್ರ ಅಲ್ಪ ಸಂಖ್ಯಾತ ಕಚೇರಿಗೆ ಕಳುಹಿಸಿಕೊಟ್ಟಿತು.

ಬಸವ ತತ್ವವನ್ನು ಪಾಲಿಸುವ ಲಿಂಗಾಯತ ಮತ್ತು ವೀರಶೈವ–ಲಿಂಗಾಯತರಿಗೆ ಪ್ರತ್ಯೇಕ ಧರ್ಮದ ಹಾಗೂ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ನೀಡಬಹುದು ಎಂದು ನಾಗಮೋಹನದಾಸ ವರದಿ ಆಧಾರಿತ ಅಂದಿನ ಕರ್ನಾಟಕ ಸರಕಾರ ತನ್ನ ನಿರ್ಣಯ ಕ್ಯಾಬಿನೆಟ್ ನೀಡಿತ್ತು.

ಕರ್ನಾಟಕ ಸಚಿವ ಸಂಪುಟದ ನಿರ್ಣಯ. 2018ರ ಮಾರ್ಚ್‌ನಲ್ಲಿ ಕರ್ನಾಟಕ ಸರ್ಕಾರವು ಈ ಸಮಿತಿಯ ವರದಿಯನ್ನು ಅಂಗೀಕರಿಸಿ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಕಳುಹಿಸಿತು.

ಕೇಂದ್ರ ಸರ್ಕಾರದ ನಿರಾಕರಣೆ

ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಕಾಯ್ದೆ (1992) ಅಡಿಯಲ್ಲಿ ಯಾವುದೇ ಸಮುದಾಯವನ್ನು ಅಲ್ಪಸಂಖ್ಯಾತ ಧರ್ಮವೆಂದು ಘೋಷಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಆದರೆ 2013ರಲ್ಲಿ ಮತ್ತು ನಂತರ 2018ರ ನವೆಂಬರ್‌ನಲ್ಲಿ ಕೇಂದ್ರ ಗೃಹ ಸಚಿವಾಲಯವು ಕರ್ನಾಟಕದ ಪ್ರಸ್ತಾವನೆಯನ್ನು ತಿರಸ್ಕರಿಸಿತು. ಲಿಂಗಾಯತರು ಹಿಂದೂ ಧರ್ಮದ ಭಾಗವಾಗಿದ್ದಾರೆ ಮತ್ತು ಅವರಿಗೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಿದರೆ ಆ ಸಮುದಾಯದಲ್ಲಿರುವ ಪರಿಶಿಷ್ಟ ಜಾತಿ (ಖಅ) ವರ್ಗದವರು ಮೀಸಲಾತಿ ಸೌಲಭ್ಯ ಕಳೆದುಕೊಳ್ಳುತ್ತಾರೆ ಎಂಬ ಕಾರಣವನ್ನು ಕೇಂದ್ರ ಸರ್ಕಾರ ನೀಡಿತ್ತು.

ಆದರೆ ಅದೇ 2013 ರ ಕೇಂದ್ರ ಸರಕಾರವು ಜೈನ ಧರ್ಮದ ಮಾನ್ಯತೆ ಮತ್ತು ಅಲ್ಪ ಸಂಖ್ಯಾತ ಸ್ಥಾನಮಾನದ ಬೇಡಿಕೆಗೆ ಅನುಗುಣವಾಗಿ ಮಾನ್ಯತೆ ನೀಡಿದ್ದು ವಿಪರ್ಯಾಸ.

3. ನ್ಯಾಯಾಲಯದ ನಿಲುವು

* ಕರ್ನಾಟಕ ಸರ್ಕಾರ ನಾಗಮೋಹನ್ ದಾಸ್ ಸಮಿತಿ ರಚಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಕಐಐ) ವಿಚಾರಣೆ ನಡೆಸಿದ್ದ ಕರ್ನಾಟಕ ಹೈಕೋರ್ಟ್, ಸಮಿತಿ ರಚಿಸಲು ಆಯೋಗಕ್ಕೆ ಅಧಿಕಾರವಿದೆ ಎಂದು ಆರಂಭದಲ್ಲಿ ಹೇಳಿತ್ತು.

* 2018ರ ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರವು ರಾಜ್ಯದ ಪ್ರಸ್ತಾವನೆಯನ್ನು ತಿರಸ್ಕರಿಸಿರುವುದಾಗಿ ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ ನಂತರ, ಹೈಕೋರ್ಟ್ ಆ ಅರ್ಜಿಗಳನ್ನು ಇತ್ಯರ್ಥಪಡಿಸಿತು.


4. ಪರ ಮತ್ತು ವಿರೋಧದ ವಾದಗಳು

* ಪರ ವಾದ (ಸ್ವತಂತ್ರ ಧರ್ಮದ ಬೇಡಿಕೆ). 12ನೇ ಶತಮಾನದಲ್ಲಿ ಬಸವಣ್ಣನವರು ವೈದಿಕ ಆಚ-



ರಣೆಗಳು, ವೇದ–ಪುರಾಣಗಳ ಪ್ರಾಬಲ್ಯ ಮತ್ತು ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿ ಇಷ್ಟಲಿಂಗ ಪೂಜೆ ಹಾಗೂ ವಚನ ಸಾಹಿತ್ಯದ ಆಧಾರದ ಮೇಲೆ ಸ್ವತಂತ್ರ ಧರ್ಮವನ್ನು ಸ್ಥಾಪಿಸಿದರು ಎಂದು ಅನೇಕ ಲಿಂಗಾಯತ ಸಂಘಟನೆಗಳು ಮತ್ತು ಹಲವು ಮಠಾಧೀಶರು ವಾದಿಸಿದ್ದರು.

ಇನ್ನು ಕೆಲ ವೀರಶೈವವಾದಿಗಳಿಗೆ ವೀರಶೈವ



ಇದು ಸನಾತನ ಮತ್ತು ಹಿಂದೂ ಧರ್ಮದ ಭಾಗವೆಂದು ಅಹವಾಲು ಇಟ್ಟಿದ್ದರು.

ನಾನೂ ಕೂಡ ಲಿಂಗಾಯತ ಧರ್ಮದ ಮಾನ್ಯತೆ ಮತ್ತು ಅಲ್ಪ ಸಂಖ್ಯಾತ ಸ್ಥಾನಮಾನದ ಬೇಡಿಕೆಗೆ ನನ್ನ ಸ್ಪಷ್ಟ ಹೇಳಿಕೆಗಳನ್ನು ಅಂದು ನ್ಯಾಯಮೂರ್ತಿ ಶ್ರೀ ನಾಗಮೋಹನದಾಸ ಅವರ ಸಮಿತಿ ಮುಂದೆ ಸಾದರಪಡಿಸಿದವನು.

ಆದರೆ ನಮ್ಮ ವಾದ ಬೇಡಿಕೆಗಳು ಕೆಲ ರಾಜಕಾರಣಿಗಳ ಸ್ವಾರ್ಥ ಮಠಾಧೀಶರ ಜಡತ್ವ ಮತ್ತು ಸಾಮಾಜಿಕ ಮುಖಂಡರ, ನಿವೃತ್ತ ಅಧಿಕಾರಿಗಳ ಜಾಣ ಮೌನ ಲಿಂಗಾಯತ ಸ್ವತಂತ್ರ ಧರ್ಮ ಮತ್ತು ಅಲ್ಪ ಸಂಖ್ಯಾತ ಸ್ಥಾನಮಾನದ ಬೇಡಿಕೆ ಇವರ ಹಿತಾಸಕ್ತಿಗೆ ಬಲಿಯಾದವು.

ನ್ಯಾಯಮೂರ್ತಿ

ನಾಗಮೋಹನದಾಸ ವರದಿ ಶಿಫಾರಸ್ಸು ಆದರಿಸಿ ಕರ್ನಾಟಕ ರಾಜ್ಯ ಸರ್ಕಾರದ ಅಲ್ಪ ಸಂಖ್ಯಾತ ಆಯೋಗವೂ ಕೂಡ ಕರ್ನಾಟಕದಲ್ಲಿ ಲಿಂಗಾಯತ ಧರ್ಮೀಯರಿಗೆ ರಾಜ್ಯದಲ್ಲಿ ಅಲ್ಪ ಸಂಖ್ಯಾತರೆಂದು ಅಧಿಸೂಚನೆ ಹೊರಡಿಸ ಬಹುದು ಎಂಬ ಸುತ್ತೋಲೆ ಹೊರಡಿಸಿದ್ದನ್ನೂ ನಾವು ಮರೆತಿದ್ದೇವೆ.

ಬೌದ್ಧ ಕ್ರೈಸ್ತ ಇಸ್ಲಾಂ ಜೈನ ಸಿಖ್ ಧರ್ಮೀಯರಂತೆ ಲಿಂಗಾಯತ ಧರ್ಮವು ಸಂಪೂರ್ಣ ಸ್ವತಂತ್ರ ಧರ್ಮ ಎಂಬುದು ನ್ಯಾಯ ಸಮ್ಮತ ಮತ್ತು ಕಾನೂನು ಸಮ್ಮತ.

ಬಸವ ಭಕ್ತರು ಈ ರಾಜಕೀಯ ಪಕ್ಷದ ಮುಖಂಡರ ನಂಬಿ ತಮ್ಮ ಸವಲತ್ತುಗಳನ್ನು ಕಳೆದುಕೊಂಡಿದ್ದು ಈ ಶತಮಾನದ ದೊಡ್ಡ ದುರಂತವೆಂದು ಹೇಳ ಬಹುದು.

ಇತ್ತೀಚೆಗೆ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಬೆಂಗಳೂರಿನಲ್ಲಿ ಅಕ್ಟೋಬರ್ 24 ರಂದು ಏರ್ಪಡಿಸಿದ ಬಸವ ತತ್ವ ಜಗದ ತತ್ವ ಎಂಬ ವಿಷಯದ ಮೇಲೆ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ

ನ್ಯಾಯಮೂರ್ತಿ ಶ್ರೀ ಸಿದ್ದಪ್ಪ ಕೆಂಪೇಗೌಡರು

ಅಭಿಮತ

ಲಿಂಗಾಯತ ಸ್ವತಂತ್ರ ಧರ್ಮವಲ್ಲವೇ? ಎನ್ನುವ ಕರ್ನಾಟಕ ಅಲ್ಪ ಸಂಖ್ಯಾತರ ಇಲಾಖೆಯಿಂದ ನ್ಯಾಯಮೂರ್ತಿ ಶ್ರೀ ನಾಗಮೋಹನದಾಸ ಅವರ ಸಮಿತಿ ವರದಿ ಮತ್ತು ಅಲ್ಪ ಸಂಖ್ಯಾತ ಇಲಾಖೆ ಹೊರಡಿಸಿದ ಸುತ್ತೋಲೆಗಳನ್ನು ಓದಿ ನನಗೆ ಅತೀವ ನೋವು ಉಂಟಾಯಿತು. ಶ್ರೀ ಸಿದ್ದಪ್ಪ ಎನ್ ಕೆಂಪೇಗೌಡರು ಇವರಿಗೆ ಇಡಿ ಲಿಂಗಾಯತ ಧರ್ಮೀಯರು ಕೃತಜ್ಞತೆ ಸಲ್ಲಿಸಬೇಕು.

ನೋವಿನ ಸಂಗತಿ ಎಂದರೆ ಇಷ್ಟೆಲ್ಲಾ ಸತ್ಯ ಗೊತ್ತಿದ್ದರೂ ಆಡಳಿತ ಮತ್ತು ವಿರೋಧ ಪಕ್ಷಗಳು ಬಸವಣ್ಣನವರ ವಾರಸುದಾರರು ಎಂದು ಹೇಳಿಕೊಳ್ಳುವ ವಿರಕ್ತ ಪರಂಪರೆಯ ಮಠಾಧೀಶರು

ಲಿಂಗಾಯತ ಮಹಾಸಭೆಯ ಪರಮೋಚ್ಚ ಪದಾಧಿಕಾರಿಗಳು ಏಕೆ ಮೌನ ವಹಿಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರ ಲಿಂಗಾಯತ ಅಲ್ಪ ಸಂಖ್ಯಾತ ಮಾನ್ಯತೆಗೆ ಮೀನು ಮೇಷ ಮಾಡುತ್ತಿರುವುದು ಏಕೆ? ಉತ್ತರ ಸಿಗದ ಲಿಂಗಾಯತರಿಗೆ ಕಾಡುವ ನೂರೆಂಟು ಪ್ರಶ್ನೆಗಳು..

ಡಾ ಶಶಿಕಾಂತ ಪಟ್ಟಣ.
ರಾಮದುರ್ಗ – ಪುಣೆ





ಮಕ್ಕಳಲ್ಲಿ ಶಿಸ್ತು, ಸಂಸ್ಕಾರ ಹಾಗೂ ದೇಶಭಕ್ತಿ ಬೆಳೆಸುವುದು ಅಗತ್ಯ :ಸಾತಿಹಾಳ

■ **ಉದಯರಶ್ಮಿ ದಿನಪತ್ರಿಕೆ**

ಆಲಮೇಲ: ತಾಲೂಕು ಮಕ್ಕಳ ಸಾಹಿತ್ಯ ಸಂಗಮ ವತಿಯಿಂದ ವಿಶ್ವೇಶ್ವರ ಬಾಲಭಾರತಿ ಪ್ರಾಥಮಿಕ ಶಾಲೆಯ ಆಶ್ರಯದಲ್ಲಿ ಮಕ್ಕಳ ದಿನಾಚರಣೆಯ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ಮಾತನಾಡಿದ ಎಸ್.ಎಸ್.ಸಾತಿಹಾಳ ರವರು, ಪಂಡಿತ್ ಜವಾಹರಲಾಲ್ ನೆಹರು ಅವರ ಮಕ್ಕಳ ಮೇಲಿನ ಪ್ರೀತಿ, ವ್ಯಕ್ತಿತ್ವ ಹಾಗೂ ಸಾರ್ಥಕ ಬದುಕನ್ನು ಸ್ಮರಿಸಿದರು. ನೆಹರು ಅವರು ಮಕ್ಕಳನ್ನು ಬಹಳವಾಗಿ ಪ್ರೀತಿಸುತ್ತಿದ್ದರು. "ಇಂದಿನ ಮಕ್ಕಳ ಕಣ್ಣುಗಳಲ್ಲಿ ನಾಳಿನ ಭಾರತವನ್ನು ನಾನು ನೋಡುತ್ತೇನೆ" ಎಂಬ ಅವರ ಆಶಯವು ಮಕ್ಕಳ ಮಹತ್ವವನ್ನು ಸಾರುತ್ತದೆ. ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುವ ಮೂಲಕ ಮಕ್ಕಳ ಭವಿಷ್ಯದ ಬಗ್ಗೆ ಅವರಿಗಿದ್ದ ಕಾಳಜಿಯನ್ನು ಸ್ಮರಿಸಲಾಗುತ್ತಿದೆ ಎಂದು ತಿಳಿಸಿದರು.ಮಕ್ಕಳು ತಂದೆ–ತಾಯಿಯನ್ನು ಗೌರವಿಸಬೇಕು, ಗುರುಗಳಿಗೆ ನಮಿಸಬೇಕು, ಶಿಸ್ತನ್ನು ಪಾಲಿಸಬೇಕು. ಇಂತಹ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ. ಸಂಸ್ಕಾರ, ಶಿಸ್ತು ಮತ್ತು ದೇಶಭಕ್ತಿಯ ಗುಣಗಳನ್ನು ಬೆಳೆಸಿಕೊಂಡು ಉತ್ತಮ ಪ್ರಜೆಗಳಾಗಿ ರೂಪುಗೊಂಡಾಗ ಮಾತ್ರ ಸುಂದರ ಸಮಾಜ ಹಾಗೂ ಸದೃಢ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಈ ವೇಳೆ ಸಂಸ್ಥೆಯ ಅಧ್ಯಕ್ಷ ಎಸ್–ಆಯ್.ಜೋಗೂರ, ಅರವಿಂದ ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷ ಎಸ್.ಎಸ್.ಶಿವಸಿಂಪಿಗೇರ, ತಾಲೂಕು ಅಧ್ಯಕ್ಷ ಲಕ್ಷ್ಮೀಪುತ್ರ ಕಿರನಳ್ಳಿ, ರಮೇಶ ಗಂಗನಳ್ಳಿ, ಗೀತಾ ಎಸ್, ಪತ್ರಕರ್ತ ಅಬ್ದುಲ್ ಗನಿ ದೇವರಮನಿ, ಉಮೇಶ ಕಟಬರ, ಸಿದ್ದು ಮುಗಳಿ, ಎಸ್.ಎ.ಬಿರಾದಾರ, ಕುದರತ್ ಅಲಿ ಭೂಸನೂರ, ಮಹಾಂತೇಶ ಹಳೇಮನಿ ಹಾಗೂ ಶಿಕ್ಷಕವೃಂದದವರು ಉಪಸ್ಥಿತರಿದ್ದರು.



ಇಂದಿನ ಮಕ್ಕಳೆ ನಾಳಿನ ಪ್ರಜೆಗಳು :ಎಂ.ಆರ್.ಡೋಣ

■ **ಉದಯರಶ್ಮಿ ದಿನಪತ್ರಿಕೆ**

ಸಿಂದಗಿ: ಇಂದಿನ ಮಕ್ಕಳೆ ನಾಳಿನ ಪ್ರಜೆಗಳು, ಮಕ್ಕಳ ದಿನಾಚರಣೆ ಮಾಡುವ ಮೂಲಕ ಅವರ ಹಕ್ಕುಗಳು, ಆರೈಕೆ ಮತ್ತು ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವಕಾರ್ಯವನ್ನುಮಾಡಲಾಗುತ್ತಿದೆ.ಪಂಡಿತ ಜವಾಹರಲಾಲ ನೆಹರು ಅವರ ಮರಣದ ನಂತರ, ಅವರ ಜನ್ಮದಿನದ ಸವಿನೆನಪಿಗಾಗಿ ನಂ.14ರಂದು ಭಾರತದಲ್ಲಿ ಮಕ್ಕಳ ದಿನಾಚರಣೆ ಆಚರಿಸಲಾಗುತ್ತದೆ ಎಂದು ಶಿಕ್ಷಕ, ಸಾಹಿತಿ ಎಂ.ಆರ್.ಡೋಣ ಹೇಳಿದರು.

ಸಿಂದಗಿ ನಗರದ ಕಾವ್ಯ ಸಮೂಹ ಶಿಕ್ಷಣ ಸಂಸ್ಥೆಯ ಕಾವ್ಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಮಕ್ಕಳ ದಿನಾಚರಣೆಯಲ್ಲಿ ಮಾತನಾಡಿದ ಅವರು, ಮಕ್ಕಳು ಪ್ರೀತಿಯಿಂದ ನೆಹರು ರವರನ್ನು ಚಾಚಾ ನೆಹರು ಎಂದು ಕರೆಯುತ್ತಿದ್ದರು. ಈ ದಿನದಂದು ಭಾರತದಾದ್ಯಂತ ಮಕ್ಕಳಿಗಾಗಿ ಮತ್ತು ಅನೇಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಪತ್ರಕರ್ತ ಪಂಡಿತ ಯಂಪೂರೆ ಚಿಕ್ಕ ಮಕ್ಕಳ ತಜ್ಞೆ ಡಾ.ಸರೋಜನಿ ದಾನಗೊಂಡ ಮಾತನಾಡಿದರು.

ಸಂಸ್ಥೆಯ ಸಂಚಾಲಕಿ ಕಾಂಚನಾ ನಾಗರಬೆಟ್ಟ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಕುಂತಲಾ ಹಿರೇಮಠ ವೇದಿಕೆ ಮೇಲಿದ್ದರು. ಆಸ್ಮಾ ಮಸಳಿ ನಿರೂಪಿಸಿದರು.

ಅಂಚೆ ಜೀವವಿಮೆ (ಪಿಎಲ್‌ಐ & ಆರ್‌ಪಿಎಲ್‌ಐ) ಸೇವೆ ತಾತ್ಕಾಲಿಕ ವ್ಯತ್ಯಯ

■ **ಉದಯರಶ್ಮಿ ದಿನಪತ್ರಿಕೆ**

ದೇವರಹಿಪ್ಪರಗಿ: ಭಾರತೀಯ ಅಂಚೆ ಇಲಾಖೆಯ ಅಂಚೆ ಜೀವ ವಿಮೆ (ಪಿಎಲ್ಐ) ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ (ಆರ್‌ಪಿಎಲ್ಐ) ಗ್ರಾಹಕರಿಗೆ ಮಹತ್ವದ ಸೂಚನೆ ನೀಡಲಾಗಿದೆ. ಇಲಾಖೆಯ ವಿಮಾ ಸೇವೆಗಳ ತಾಂತ್ರಿಕ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಹಿನ್ನೆಲೆಯಲ್ಲಿ ನವೆಂಬರ್ 16ರಿಂದ 24ರವರೆಗೆ ಪಿಎಲ್‌ಐ ಹಾಗೂ ಆರ್‌ಪಿಎಲ್‌ಐ ಸೇವೆಗಳಲ್ಲಿ ತಾತ್ಕಾಲಿಕ ವ್ಯತ್ಯಯ ಉಂಟಾಗಲಿದೆ.

ಅಂಚೆ ಜೀವವಿಮೆ ಮತ್ತು ಗ್ರಾಮೀಣ ಅಂಚೆ ಜೀವವಿಮೆ ಸೇವೆಗಳಿಗೆ ಸಂಬಂಧಿಸಿದಂತೆ ನೂತನ ವಿಮಾ ನಿರ್ವಹಣಾ ವ್ಯವಸ್ಥೆ (ಇನ್ಸೂರೆಂಟಿ–ಜಜಜಿಟಿಜಜನ್ಸ್ ಮ್ಯಾನೇಂಜ್‌ಮೆಂಟ್ ಸೊಲ್ಯೂಷನ್–ಆಯ್‌ಎಮ್‌ಎಸ್) ಜಾರಿಗೊಳಿಸಲಾಗುತ್ತಿದೆ. ಈ ವ್ಯವಸ್ಥೆಯ ಬದಲಾವಣೆ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಪಿಎಲ್‌ಐ/ಆರ್‌ಪಿಎಲ್‌ಐ ಸೇವೆಗಳು, ಅಂಚೆ ವಿಮಾ ಕೇಂದ್ರಗಳು (ಸಿಪಿಸಿ) ಹಾಗೂ ಆನ್‌ಲೈನ್ ಮೂಲಕ ಲಭ್ಯವಿರುವ ಕೆಲವು ಸೇವೆಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿವೆ.

ನೂತನ ತಾಂತ್ರಿಕ ವ್ಯವಸ್ಥೆ ಜಾರಿಯಿಂದ ಮುಂದಿನ ದಿನಗಳಲ್ಲಿ ಪಿಎಲ್‌ಐ/ಆರ್‌ಪಿಎಲ್‌ಐ ಸೇವೆಗಳು ಮತ್ತಷ್ಟು ಸುಗಮ ಹಾಗೂ ಪರಿಣಾಮಕಾರಿಯಾಗಲಿವೆ ಎಂದು ವಿಜಯಪುರ ಜಿಲ್ಲಾ ಅಂಚೆ ಅಧೀಕ್ಷಕ ಮಹಾಂತೇಶ ತೊಗರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜಾಪುರ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆಯ ಖಜಾಂಚಿ ವಿನೋದ ಖೇಡ ಅಭಿಮತ

ಮಕ್ಕಳಲ್ಲಿ ಆತ್ಮವಿಶ್ವಾಸ ಬಿತ್ತುವುದೇ ಮಕ್ಕಳ ದಿನಾಚರಣೆ ಆಶಯ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಬಿಜಾಪುರ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಎಂ.ಎಸ್. ಖೇಡ್ ಫ್ರೀ ಪ್ರೈಮರಿಂಡ್ ಪ್ರೈಮರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಶನಿವಾರ ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜಾಪುರ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆಯ ಖಜಾಂಚಿ ವಿನೋದ ಖೇಡ ಅವರು, ಸಂಸ್ಕಾರ ಮತ್ತು ಅವರು, ಭಾರತದ ಮೊದಲ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರ ಜನ್ಮದಿನವನ್ನು ಮಕ್ಕಳ ದಿನಾಚರಣ 'ಯನ್ನಾಗಿ ಆಚರಿಸಲಾಗುತ್ತಿದೆ. ಮಕ್ಕಳ ಮೇಲಿನ ಅಪಾರ ಪ್ರೀತಿ ಹಾಗೂ ಕಾಳಜಿಯಿಂದ ನೆಹರು ಅವರು ಮಕ್ಕಳ ಮನಸ್ಸಿನಲ್ಲಿ ಚಾಚಾ ನೆಹರು ಎಂದೇ ಗುರುತಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಮಕ್ಕಳೇ ದೇಶದ ನಿಜವಾದ ಸಂಪತ್ತು. ಪ್ರತಿಯೊಂದು ಮಗುವಿನಲ್ಲಿಯೂ ಒಂದೊಂದು ವಿಶಿಷ್ಟ ಪ್ರತಿಭೆ ಅಡಗಿರುತ್ತದೆ. ಆ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ, ಬೆಳೆಯಲು ಅವಕಾಶ ಕಲ್ಪಿಸುವುದು ಪೋಷಕರು, ಶಿಕ್ಷಕರು ಹಾಗೂ ಸ ಸಮಾಜದ ಜವಾಬ್ದಾರಿಯಾಗಿದೆ. ವಿಶೇಷವಾಗಿ ವಿಶೇಷ ಚೇತನ ಮಕ್ಕಳು ಯಾವುದೇ ಕಾರಣಕ್ಕೂ ತಾವು ಇತರರಿಗಿಂತ ಕಡಿಮೆ ಎಂಬ ಭಾವನೆ ಬೆಳೆಸಿಕೊಳ್ಳಬಾರದು. ಆತ್ಮವಿಶ್ವಾಸ, ಪರಿಶ್ರಮ ಮತ್ತು ನಿರಂತರ ಪ್ರಯತ್ನವಿದ್ದರೆ ಜೀವನದಲ್ಲಿ ಯಾವುದೇ ಗುರಿಯನ್ನು ತಲುಪಲು ಸಾಧ್ಯ ಎಂದು ಪ್ರೇರಣಾದಾಯಕ ಮಾತುಗಳನ್ನಾಡಿದರು. ಮಕ್ಕಳಿಗೆ ಕೇವಲ ಅಂಕಗಳೇ ಸಾಧನೆಯ ಮಾನದಂಡವಲ್ಲ. ಉತ್ತಮ ನಡತೆ, ಮಾನವೀಯತೆ, ಶಿಸ್ತು, ಆತ್ಮಗೌರವ ಹಾಗೂ ಪರಸ್ಪರ ಪ್ರೀತಿಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬ ಮಗುವಿಗೂ ತನ್ನದೇ ಆದ ಕನಸು ಮತ್ತು ಸಾಮರ್ಥ್ಯವಿದೆ. ಆ ಕನಸುಗಳಿಗೆ ರೆಕ್ಕೆ ನೀಡುವ ಕೆಲಸ ಶಿಕ್ಷಣ ಸಂಸ್ಥೆಗಳು ಮಾಡಬೇಕು. ಮಕ್ಕಳ ಮುಖದಲ್ಲಿನ ನಗು ಮತ್ತು ಅವರ ಬದುಕಿನಲ್ಲಿನ ಆತ್ಮವಿಶ್ವಾಸವೇ ಇಂತಹ ಕಾರ್ಯಕ್ರಮಗಳ ನಿಜವಾದ ಸಾರ್ಥಕತೆ ಎಂದು ವಿನೋದ್ ಖೇಡ್ ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಸೀತಾ ಲಮಾಣಿ, ಶ್ರೀದೇವಿ ಸೊನ್ನದ, ಅಪ್ಪು ಇಂಡಿ, ಗಂಗೂಬಾಯಿ ಹಂಗರಗಿ, ಬುರುಡ ಮೇಡಂ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸದೃಢ ಭಾರತ ನಿರ್ಮಾಣಕ್ಕೆ ನೆಹರು ಅವರ ಬಲಿಷ್ಠ ನೀತಿಗಳು ಕಾರಣ

■ **ಉದಯರಶ್ಮಿ ದಿನಪತ್ರಿಕೆ**

ಸಿಂದಗಿ: ಸ್ವಾತಂತ್ರ್ಯಾನಂತರ ಭಾರತದಲ್ಲಿ ಅಸ್ಪೃಶ್ಯತೆ, ನಿರುದ್ಯೋಗ ಹಾಗೂ ಹಿಂದುಳಿದ ಸಾಮಾಜಿಕ ಪರಿಸ್ಥಿತಿಗಳನ್ನು ಹೋಗಲಾಡಿಸಿ, ಸದೃಢ ಭಾರತ ನಿರ್ಮಾಣ ಮಾಡುವಲ್ಲಿ ಪಂಡಿತ ಜವಾಹರಲಾಲ ನೆಹರು ಅವರ ಬಲಿಷ್ಠ ನೀತಿಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಹಾಗೂ ಪತ್ರಿಕಾ ಅಂಕಣಕಾರ ಪ್ರೊ.ಪ್ರಶಾಂತ ಕುಲಕರ್ಣಿ ಹೇಳಿದರು.

ಪಟ್ಟಣದ ನಾಗೂರ ಬಡಾವಣೆಯ ಶ್ರೀ ಸಮರ್ಥ ವಿದ್ಯಾವಿಕಾಸ ವಿವಿಧೋದ್ದೇಶಗಳ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಪ್ರೇರಣಾ ಶಿಶುನಿಕೇತನ, ವಿದ್ಯಾನಿಕೇತನ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಹಾಗೂ ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆ, ಪಂಡಿತ ಜವಾಹರಲಾಲ ನೆಹರು ಜಯಂತ್ಯುತ್ಸವ ಹಾಗೂ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ನೆಹರು ಅವರು 17 ವರ್ಷಗಳ ಕಾಲ ಪ್ರಧಾನಮಂತ್ರಿಯಾಗಿ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಮಕ್ಕಳನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಅವರು ತಮ್ಮ ಜನ್ಮದಿನವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸುವಂತೆ ಮಾಡಿದರು. ಇಂದಿನ ಮಕ್ಕಳು ಉತ್ತಮ ಸಂಸ್ಕಾರಯುತ ಪ್ರಜೆಗಳಾಗಿ ರೂಪುಗೊಳ್ಳಬೇಕು. ಪೋಷಕರು ಮಕ್ಕಳಿಗೆ ಹಣ ನೀಡುವುದರ ಜೊತೆಗೆ ಅದರ ಮೌಲ್ಯ ಹಾಗೂ ಆರ್ಥಿಕ ಶಿಸ್ತಿನ ಮಹತ್ವವನ್ನೂ ತಿಳಿಸಿಕೊಡಬೇಕು ಎಂದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಆರ್.ಡಿ. ಕುಲಕರ್ಣಿ, ಮಕ್ಕಳು ಕೇವಲ ವಿದ್ಯಾರ್ಥಿಗಳಾಗದೆ ದೇಶದ ಸದೃಢ ಪ್ರಜೆಗಳಾಗಿ ರೂಪುಗೊಳ್ಳಬೇಕು. ನೆಹರು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ದೇಶವನ್ನು ವಿಶ್ವದ ಶ್ರೇಷ್ಠ ರಾಷ್ಟ್ರಗಳ ಸಾಲಿನಲ್ಲಿ ಮುನ್ನಡೆಸುವ ಜವಾಬ್ದಾರಿ ಇಂದಿನ ಮಕ್ಕಳ ಮೇಲಿದೆ ಎಂದರು.



ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಹಾಗೂ ಪತ್ರಿಕಾ ಅಂಕಣಕಾರ ಪ್ರೊ.ಪ್ರಶಾಂತ ಕುಲಕರ್ಣಿ ಅಭಿಮತ

ಕಾರ್ಯಕ್ರಮದಲ್ಲಿ ಮಕ್ಕಳಿಂದ ಜೀವನ ಮೌಲ್ಯಗಳನ್ನು ಸಾರುವ ರೈತ, ವೈದ್ಯ, ವಕೀಲ, ಹೂವಾಡಗಿತ್ತಿ, ಇಂಜಿನಿಯರ್, ಬುಡುಬುಡಿಕೆ ಸೇರಿದಂತೆ ವಿವಿಧ ವೇಷಭೂಷಣಗಳ ಛದ್ಮವೇಷ ಪ್ರದರ್ಶನ ನಡೆಯಿತು. ದಕ್ಷಿಣ ಕರ್ನಾಟಕದ ಕಾಂತಾರ ವಿಶೇಷ ಏಕಪಾತ್ರಾಭಿನಯವೂ ಪಾಲಕರ ಮೆಚ್ಚುಗೆಗೆ ಪಾತ್ರವಾಯಿತು. ಚದುರಂಗ ಆಟದಲ್ಲಿ ಸಾಧನೆ ಮಾಡಿದ ಕುಮಾರ ಅಂಚನ ಸರಡಗಿ ಹಾಗೂ ಅನಿರುದ್ಧ ಯಾಡಗಿ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಪ್ರೇರಣಾ ಶಿಶುನಿಕೇತನದ ಪುಟಾಣಿಗಳಿಂದ ವಿವಿಧ ಸಾಂಸ್ಕೃತಿಕ ರೂಪಕಗಳು, ನಾಟಕ, ನೃತ್ಯ, ಭಾವಗೀತೆ ಹಾಗೂ ಭಕ್ತಿಗೀತೆಗಳ ಪ್ರದರ್ಶನ ಜರುಗಿತು. ಸಂಸ್ಥೆಯ ನಿರ್ದೇಶಕ ಪಿ.ಡಿ. ಕುಲಕರ್ಣಿ ಹಾಗೂ ಮುಖ್ಯೋಪಾಧ್ಯಾಯಿನಿ ಎಂ.ಪಿ. ಬುಕ್ಕಾ ಉಪಸ್ಥಿತರಿದ್ದರು.

ಕುಮಾರಿ ಆದ್ಯಾ ಗೊಬ್ಬೂರ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಸತೀಶ ಕುಲಕರ್ಣಿ ಸ್ವಾಗತಿಸಿದರು. ಜಿ.ಎಸ್. ಯಂಕಂಚಿ ಹಾಗೂ ಸತೀಶ ಕುಲಕರ್ಣಿ ನಿರೂಪಿಸಿದರು. ಎಸ್.ಎಸ್. ಪಾಟೀಲ ವಂದಿಸಿದರು. ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ ರೂಪುಗೊಳ್ಳಬೇಕು :ಸಿಂಗನಳ್ಳಿ

■ **ಉದಯರಶ್ಮಿ ದಿನಪತ್ರಿಕೆ**

ಸಿಂದಗಿ: ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಿಂದಲೇ ಶಿಸ್ತು, ಸಮಯಪ್ರಜ್ಞೆ, ಸ್ವಚ್ಛತೆ, ಪರಸ್ಪರ ಗೌರವ ಹಾಗೂ ಸೇವಾ ಮನೋಭಾವವನ್ನು ಬೆಳೆಸಿಕೊಂಡು ಉತ್ತಮ ನಾಗರಿಕರಾಗಿ ರೂಪುಗೊಳ್ಳಬೇಕು ಎಂದು ಪ್ರಾಚಾರ್ಯ ಬಿ.ಎಂ.ಸಿಂಗನಳ್ಳಿ ಹೇಳಿದರು.

ಸಿಂದಗಿ ನಗರದ ಶ್ರೀ ಪ.ವಿ.ವ.ಸಂಸ್ಥೆಯ ಆರ್.ಡಿ.ಪಾಟೀಲ ಕಲಾ,ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ ರೇಂಜರ್ ಘಟಕದ ವಿದ್ಯಾರ್ಥಿಗಳಿಗೆ ಒಂದು ದಿನದ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯ ಮೌಲ್ಯಗಳ ಅರಿವು ಮೂಡಿಸುವುದು ಇಂತಹ ಶಿಬಿರಗಳ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಅಚ್ಚುಕಟ್ಟಾದ ಸಮವಸ್ತ್ರ ಧರಿಸಿ, ಸಮಯಪಾಲನೆ ಮಾಡುತ್ತಾ ಹಿರಿಯರಿಗೆ ಗೌರವ, ಕಿರಿಯರಿಗೆ ಪ್ರೀತಿ ತೋರಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಯಾರಿಗೂ ಉಪದೇಶ ಮಾಡುವ ಅಗತ್ಯವಿಲ್ಲ; ನಮ್ಮ ನಡವಳಿಕೆ, ಶಿಸ್ತು ಮತ್ತು ಸೇವಾ ಮನೋಭಾವವೇ ಇತರರಿಗೆ ಮಾದರಿಯಾಗಬೇಕು. ನಮ್ಮನ್ನು ನೋಡಿ ಇತರರು ತಮ್ಮನ್ನು ತಾವು ತಿದ್ದಿಕೊಳ್ಳುವಂತಾಗಬೇಕು. ಅದುವೇ ನಿಜವಾದ ವ್ಯಕ್ತಿತ್ವದ ಗೆಲುವು ಎಂದರು.



ಈ ವೇಳೆ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ನೋಡಲ್ ಅಧಿಕಾರಿ ಡಿ.ಎ.ಅತ್ತಾರ, ಸ್ಕೌಟ್ಸ್ ಮತ್ತು ಗೈಡ್ಸ್ ಅಧಿಕಾರಿ ಶಿವಯೋಗಿ ತಾಳಿಕೋಟಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ನಿಪುಣ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು.

ಪಿ.ವಿ.ಮಹಲಿನಮಠ, ಎನ್.ಬಿ.ಪೂಜಾರಿ, ಡಾ.ಎಸ್.ಸಿ.ಜೋಗೂರ, ಎಸ್.ಆರ್. ಬೂದಿಹಾಳ, ಎಸ್. ಎಚ್.ಜಾಧವ, ಬಿ.ಬಿ.ಜಮಾದಾರ, ವ್ಹಿ.ಪಿ.ನಂದಿಕೋಲ, ವ್ಹಿ.ಕೆ.ಹಿರೇಮಠ, ಎಂ.ಐ.ಮುಜಾವರ್, ಎನ್.ಎಂ.ಶೆಳ್ಳಗಿ, ರೋಹಿತ್ ಸುಲ್ಪಿ, ಸುನೀಲಪಾಟೀಲ, ಶಿವರಾಜ ಕುಂದಗೋಳ, ಪ್ರಸನ್ ಜೋಗೂರ, ರಾಹುಲ ನಾರಾಯಣಕರ್, ಎಸ್.ಜಿ.ಮಾರ್ಸನಳ್ಳಿ, ಉದಯ ಶಿವಸಿಂಪಿ, ನೀಲಕಂಠ ಮೇತ್ರಿ, ಶ್ರೀದೇವಿ ತಳವಾರ, ರಾಧಿಕಾ, ಸೃಷ್ಠಿ, ಸುಮಿತ್ರಾ ಕರನಾಳ, ಭಾಗ್ಯಮ್ಮ ಕೋರಿ, ದೊಡ್ಡಯ್ಯ ಸ್ಥಾವರಮಠ, ಶೋಭಾ ಶಂಭೇವಾಡ ಸೇರಿದಂತೆ ಇತರರು ಇದ್ದರು.

ನ.16ರಂದು ಸಹಕಾರ ಸಚಿವ ಲಕ್ಷ್ಮಣ ಸವದಿ ಅವರಿಂದ ಉದ್ಘಾಟನೆ | ಮೂರು ವಿಧಾನಸಭಾ ಕ್ಷೇತ್ರಗಳ 8,261 ಸಹಕಾರ ಸಂಸ್ಥೆಗಳಿಗೆ ಅನುಕೂಲ

ಅಥಣಿಯಲ್ಲಿ ನೂತನ ಎ.ಆರ್.ಸಿ.ಎಸ್. ಕಚೇರಿ ಉದ್ಘಾಟನೆಗೆ ಸಿದ್ಧತೆ

■ **ಉದಯರಶ್ಮಿ ದಿನಪತ್ರಿಕೆ**

ಅಥಣಿ: ಸಹಕಾರ ಇಲಾಖೆಯ ಆಡಳಿತಾತ್ಮಕ ಸೇವೆಗಳನ್ನು ಜನರಿಗೆ ಮತ್ತಷ್ಟು ಹತ್ತಿರವಾಗಿಸುವ ಉದ್ದೇಶದಿಂದ ಅಥಣಿ ಪಟ್ಟಣದಲ್ಲಿ ನೂತನವಾಗಿ ಸೃಜನೆಯಾಗಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರ (ಎ.ಆರ್.ಸಿ.ಎಸ್.) ಕಚೇರಿಯ ಉದ್ಘಾಟನಾ ಸಮಾರಂಭ ಹಾಗೂ 73ನೇ ಅಖಿಲ ಭಾರತ ಸಹಕಾರ ಸಪ್ತಾಹದ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ನವೆಂಬರ್ 16ರಂದು ಬೆಳಿಗ್ಗೆ 10.30ಕ್ಕೆ ಅಥಣಿಯ ಕೃಷ್ಣಾ ಸಹಕಾರ ಸಕ್ಕರೆ ಕಾರ್ಖಾನೆ ಆವರಣದಲ್ಲಿರುವ ರೈತ ಭವನದಲ್ಲಿ ಆಯೋಜಿಸಲಾಗಿದೆ.

ಸಹಕಾರ ಸಚಿವರು ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿ ಅವರು ನೂತನ ಕಚೇರಿಯನ್ನು ಉದ್ಘಾಟಿಸಲಿದ್ದು, ಜಿಲ್ಲೆಯ ಶಾಸಕರು, ಗಣ್ಯರು, ಸಹಕಾರ ಕ್ಷೇತ್ರದ ಮುಖಂಡರು, ಸಹಕಾರ ಸಂಘಗಳ ಪದಾಧಿಕಾರಿಗಳು, ಸದಸ್ಯರು ಹಾಗೂ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಹಕಾರ ಅಭಿವೃದ್ಧಿ ಅಧಿಕಾರಿ ಆರ್. ಎನ್. ನೂಲಿ ತಿಳಿಸಿದ್ದಾರೆ.

ಈ ಹಿಂದೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ನಿಪ್ಪಾಣಿ, ರಾಯಬಾಗ, ಅಥಣಿ ಹಾಗೂ ಕಾಗವಾಡ ಸೇರಿದಂತೆ ಐದು ತಾಲೂಕುಗಳ (ಆರು ವಿಧಾನಸಭಾ ಕ್ಷೇತ್ರಗಳ) ಸಹಕಾರ ಇಲಾಖೆಯ ಆಡಳಿತಾತ್ಮಕ ಕಾರ್ಯಗಳು ಚಿಕ್ಕೋಡಿಯ ಎ.ಆರ್.ಸಿ.ಎಸ್. ಉಪವಿಭಾಗೀಯ ಕಚೇರಿಯ ವ್ಯಾಪ್ತಿಗೆ ಒಳಪಟ್ಟಿದ್ದವು. ಇದರಿಂದ ಸಹಕಾರ ಸಂಘಗಳು, ಬ್ಯಾಂಕುಗಳು ಹಾಗೂ ಸಾರ್ವಜನಿಕರು ವಿವಿಧ ಶಾಸನಬದ್ಧ ಕಾರ್ಯಗಳಿಗಾಗಿ ಚಿಕ್ಕೋಡಿಗೆ ತೆರಳಬೇಕಾದ ಪರಿಸ್ಥಿತಿ ಇತ್ತು.

ಈ ಸಮಸ್ಯೆಯನ್ನು ಮನಗಂಡು ಅಥಣಿ ಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಅವರು 2023ರ ಡಿಸೆಂಬರ್ 5ರಂದು ಅಂದಿನ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರಿಗೆ ಪತ್ರ ಬರೆದು ಅಥಣಿಯಲ್ಲಿ ಎ.ಆರ್.ಸಿ.ಎಸ್. ಕಚೇರಿ ಸ್ಥಾಪಿಸುವಂತೆ ಮನವಿ ಸಲ್ಲಿಸಿದ್ದರು. ಆರಂಭದಲ್ಲಿ ಆರ್ಥಿಕ ಇಲಾಖೆಯಿಂದ ಹೊಸ ಕಚೇರಿ ಸ್ಥಾಪನೆಗೆ ಮಂಜೂರಾತಿ ದೊರೆಯದಿದ್ದರೂ, ಲಕ್ಷ್ಮಣ ಸವದಿ ಅವರು ನಿರಂತರ ಪ್ರಯತ್ನ ಮುಂದುವರಿಸಿದ್ದರು.

ಅಂತಿಮವಾಗಿ ಇಲಾಖೆಗೆ ಹೆಚ್ಚುವರಿ ಆರ್ಥಿಕ ಹೊರೆಯಾಗದಂತೆ, ಈಗಾಗಲೇ ಮಂಜೂರಾಗಿದ್ದ ಹುದ್ದೆಗಳನ್ನು ಸ್ಥಳಾಂತರಿಸುವ ಮೂಲಕ ಬೆಳಗಾವಿ ಜಿಲ್ಲೆಯಲ್ಲಿ ನಾಲ್ಕನೇ ಉಪವಿಭಾಗೀಯ ಕಚೇರಿಯಾಗಿ ಅಥಣಿಯಲ್ಲಿ ನೂತನ ಕಚೇರಿಯನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಈ ಕುರಿತು ಕರ್ನಾಟಕ ಸರ್ಕಾರವು 2026ರ ನವೆಂಬರ್ 2ರಂದು ಅಧಿಕೃತ ಆದೇಶ ಹೊರಡಿಸಿದೆ.

ನೂತನ ಎ.ಆರ್.ಸಿ.ಎಸ್. ಕಚೇರಿ ಅಥಣಿಯ ಕಾರ್ಯವ್ಯಾಪ್ತಿಗೆ ಅಥಣಿ, ಕಾಗವಾಡ ಹಾಗೂ ಕುಡಚಿ ವಿಧಾನಸಭಾ ಕ್ಷೇತ್ರಗಳು ಒಳಪಡಲಿವೆ. ಈ ಮೂರು ಕ್ಷೇತ್ರಗಳ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿಗಳು, ಬ್ಯಾಂಕುಗಳು ಹಾಗೂ ಇತರೆ ಸಹಕಾರ ಸಂಸ್ಥೆಗಳು ಇನ್ನು ಮುಂದೆ ಅಥಣಿಯಲ್ಲಿಯೇ ಇಲಾಖೆಯ ಸೇವೆಗಳನ್ನು ಪಡೆಯಲು ಅನುಕೂಲವಾಗಲಿದೆ.



ಈ ಕಚೇರಿಯ ವ್ಯಾಪ್ತಿಯಲ್ಲಿ ಒಟ್ಟು 8,261 ಸಹಕಾರ ಸಂಬಂಧಿತ ಸಂಸ್ಥೆಗಳು ಮತ್ತು ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರ ಹೀಗಿದೆ:

- **ವಿವಿಧ ರೀತಿಯ ಸಹಕಾರ ಸಂಘಗಳು 1,235**
- **ಸೌಹಾರ್ದ ಸಹಕಾರಿಗಳು 112**
- **ಗಿರವಿ ಅಂಗಡಿಗಳು 26**
- **ಲೇವಾದೇವಿ ಸಂಸ್ಥೆಗಳು 90**
- **ಚಿಟ್ ಸಂಸ್ಥೆಗಳು 6**
- **ಇತರೆ ಸಂಘ–ಸಂಸ್ಥೆಗಳು 6,792**

ನೂತನ ಕಚೇರಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆ ಸೇರಿದಂತೆ ಒಟ್ಟು 13 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಪ್ರತಿ ವರ್ಷ ನವೆಂಬರ್ 14ರಿಂದ 20ರವರೆಗೆ ರಾಜ್ಯಾದ್ಯಂತ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತದೆ. ಅದರಂತೆ ಈ ವರ್ಷವೂ ನವೆಂಬರ್ 14ರಿಂದ 20ರವರೆಗೆ ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಹಾಗೂ ಜಿಲ್ಲೆಯ ವಿವಿಧ ಸಹಕಾರ ಸಂಘಗಳು, ಬ್ಯಾಂಕುಗಳು ಮತ್ತು ಸೌಹಾರ್ದ ಸಹಕಾರಿಗಳ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಅಥಣಿಯಲ್ಲಿ ನೂತನ ಕಚೇರಿ ಸ್ಥಾಪನೆಯಾಗಿರುವುದರಿಂದ ಸಹಕಾರ ಸಂಘಗಳ ನೋಂದಣಿ, ಆಡಳಿತಾತ್ಮಕ ವ್ಯವಹಾರಗಳು, ಶಾಸನಬದ್ಧ ಕರ್ತವ್ಯಗಳು ಹಾಗೂ ಸರ್ಕಾರದ ಸಹಕಾರ ಇಲಾಖೆಯ ಯೋಜನೆಗಳ ಅನುಷ್ಠಾನ ಮತ್ತಷ್ಟು ಸುಲಭವಾಗಲಿದೆ. ಗ್ರಾಮೀಣ ಭಾಗದ ರೈತರು, ಸಹಕಾರ ಸಂಘಗಳ ಸದಸ್ಯರು ಹಾಗೂ ಸಾರ್ವಜನಿಕರಿಗೆ ಸಮಯ ಮತ್ತು ಪ್ರಯಾಣದ ವೆಚ್ಚ ಉಳಿತಾಯವಾಗಲಿದೆ.

ಆದ್ದರಿಂದ ಸಾರ್ವಜನಿಕರು, ರೈತರು, ಸಹಕಾರ ಕ್ಷೇತ್ರದ ಮುಖಂಡರು, ವಿವಿಧ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಹಕಾರ ಅಭಿವೃದ್ಧಿ ಅಧಿಕಾರಿ ಆರ್.ಎನ್. ನೂಲಿ ಮನವಿ ಮಾಡಿದ್ದಾರೆ.

ಈ ವೇಳೆ ಬಸವರಾಜ್ ತೇಲಿ ಉಪಸ್ಥಿತರಿದ್ದರು.

Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR